ಬೆಲೆ ರೂ.2.50
D.O.P - 15th of every month at Udupi Head Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ

ಮಾಸಪತ್ರಿಕೆ – 15 ಸೆಪ್ಟೆಂಬರ್ 2022

॥ ಧಿಯೋ ಯೋನಃ ಪ್ರಚೋದಯಾತ್ ॥

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 0820-2958444, 8971185844

ಸಂಪುಟ-22 ಸಂಚಿಕೆ-9 ಪುಟಗಳು-8 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

## ಚಾತುರ್ಮಾಸ್ಯದಲ್ಲಿ ಶೃಂಗೇರಿ ಜಗದ್ಗುರುಗಳ ಭೇಟಿ



ಶೃಂಗೇರಿಯ ಕಿರಿಯ ಗುರುಗಳು ಸ್ಥಾನಿಕ ಬ್ರಾಹ್ಮಣ ಸಮಾಜವನ್ನು ಉದ್ದೇಶಿಸಿ ಆಶೀರ್ವಚನ ನೀಡುತ್ತಾ 'ಧರ್ಮನುಷ್ಠಾನ' ಎಂದರೆ ಏನು, ಅನುಷ್ಠಾನ ಹೇಗೆ ಮಾಡಬೇಕು ಎಂಬ ಬಗ್ಗೆ ಪ್ರತಿಯೊಬ್ಬರಿಗೂ ತಲುಪುವ ರೀತಿಯಲ್ಲಿ ವಿವರಿಸಿ ಅತ್ಯಂತ ಸುಂದರವಾದ ಉದಾಹರಣೆ ಕೊಟ್ಟರು.

ಒಂದು ನದಿಯನ್ನು ದಡ ದಾಟಲು ಈಜಬೇಕು. ಆ ನದಿ ಅನ್ನೋದು ನಮ್ಮ ಜೀವನ, ನದಿಯ ಪ್ರವಾಹ, ವೇಗ ಅನ್ನೋದು ನಮ್ಮ ಕರ್ಮಗಳು. ಕೆಲವರು ಬಹಳ ಸುಲಭವಾಗಿ ನದಿ ದಾಟಲು ಸಾಧ್ಯವಾಗಬಹುದು. ಅದರ ಅರ್ಥ ಅವರ ಜೀವನದಲ್ಲಿ ಕರ್ಮಗಳ ಪ್ರತಿಬಂಧಕತೆ ಕಡಿಮೆ ಇದೆ. ಕೆಲವ್ರು ಗುರುಗಳನ್ನು ಕೇಳುತ್ತಾರಂತೆ, ನಾನು ಧರ್ಮದಲ್ಲೇ ಇದ್ದೇನೆ, ಆದರೆ ನನ್ನ ಕಷ್ಟಗಳು ಬೆಟ್ಟದಷ್ಟು ಎಂದು. ಗುರುಗಳ ಉತ್ತರ ತುಂಬಾ ಸೊಗಸಾಗಿದೆ, ಅಂತಹವರು ನದಿಯ ಸುಳಿಯಲ್ಲಿ ಈಜುವಂತೆ ಭಾಸವಾಗಬಹುದು. ಅವರು ದಡ ಸೇರೋದೇ ಇಲ್ಲ. ಆದರೆ ಇಂತಹವರು ನ್ಯಾಯ ಧರ್ಮದಲ್ಲಿ ಇಲ್ಲದೇ ಇರುವವರೇನಲ್ಲ, ಧರ್ಮಿಷ್ಟರಾಗಿದ್ದರೂ ಕೂಡ ಕರ್ಮಗಳ ಪ್ರತಿಬಂಧಕತೆ ಜಾಸ್ತಿ ಇದೆ. ಇನ್ನು ಕೆಲವರಿಗೆ ನದಿಯ ಹರಿವಿನ ವಿರುದ್ಧ ದಿಕ್ಕಿನಲ್ಲಿ ಚಲಿಸುವಂತೆ ಭಾಸವಾಗಬಹುದು. ಅದು ಏನೇ ಇರಲಿ, ಕಷ್ಟಗಳು ಎಷ್ಟೇ ಇರಲಿ ದಾನ ಧರ್ಮ, ಪರೋಪಕಾರದಿಂದ ವಿಚಲಿತರಾಗಬಾರದು ಎಂದು ಎಚ್ಚರಿಸಿದ್ದಾರೆ. ನಮ್ಮ ಪರಂಪರಾಗತವಾಗಿ ಬಂದ ಎಲ್ಲಾ ಆಚರಣೆಗಳನ್ನೂ ಮುಂದುವರಿಸಿಕೊಂಡು ಹೋಗಲು ಕಿವಿಮಾತು ಹಾಗೂ ಸಂಘದೊಳಗಿನ ಐಕ್ಯಮತದ ಪ್ರಾಮುಖ್ಯತೆಯನ್ನು ಸ್ಪಷ್ಟವಾಗಿ ತಿಳಿಸಿ ಎಲ್ಲರಿಗೂ ಮಂಗಳವಾಗಲಿ ಎಂದು ಆಶೀರ್ವಚಿಸಿದರು. ಚೌತಿಯ ಮೊದಲಿನ ಆದಿತ್ಯವಾರ ತಾ.28.08.2022ರಂದು ಸ್ಥಾನಿಕ ಬ್ರಾಹ್ಮಣ ಸಮಾಜದ ಎಲ್ಲಾ ಪ್ರದೇಶಗಳ ಎಲ್ಲಾ ಸಂಘಗಳ ಸಮಾಜಬಾಂಧವರು ಒಗ್ಗಟ್ಟಿನಿಂದ ಶೃಂಗೇರಿಯಲ್ಲಿ ಸೇರಿದ್ದರು. ದೇವರ ದರ್ಶನ, ಗುರುಗಳ ಭೇಟಿ ಅವಿಸ್ಮರಣೀಯ ಅನುಭವವಾಗಿತ್ತು. ಈ ಸಂದರ್ಭದಲ್ಲಿ ಶೃಂಗೇರಿ ಮಠದ ದ.ಕ.ಪ್ರಾಂತ್ಯದ ಧರ್ಮಾಧಿಕಾರಿಗಳಾದ ಶ್ರೀ ಸತ್ಯಶಂಕರ ಬೊಳ್ಳಾವರವರು ಎಲ್ಲಾ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಆಯೋಜಿಸಿದ್ದರು. ಉಡುಪಿ ಪ್ರಾಂತ್ಯದ ಧರ್ಮಾಧಿಕಾರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರು ಸಹಕರಿಸಿದ್ದರು.

## ಉಡುಪಿ ಸಂಘದಿಂದ ಶೃಂಗೇರಿ ಗುರುಗಳ ಭೇಟಿ



ತಾರೀಕು 28.08.2022ರಂದು ಚೌತಿಯ ಮೊದಲಿನ ಆದಿತ್ಯವಾರ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಕುಂಜಿಬೆಟ್ಟು, ಉಡುಪಿ ಇದರ ವತಿಯಿಂದ ಎರಡು ಬಸ್ಸುಗಳಲ್ಲಿ ಸುಮಾರು 65 ಜನ ಸಮಾಜಬಾಂಧವರು ಶೃಂಗೇರಿ ಜಗದ್ಗುರುಗಳನ್ನು ಭೇಟಿಯಾಗಿ ಆಶೀರ್ವಾದ ಪಡೆಯಲು ತೆರಳಿದರು. ಉಪಾಧ್ಯಕ್ಷರಾದ ಶ್ರೀ ಯು. ಅರವಿಂದ ಕುಮಾರ್ ಮತ್ತು ಕಾರ್ಯದರ್ಶಿ ಶ್ರೀ ಪಿ. ಪ್ರಭಾಕರ ಭಂಡಿ ನೇತೃತ್ವದಲ್ಲಿ ಗುರುಗಳಿಗೆ ಪಾದ ಪೂಜೆ, ಭಿಕ್ಷಾ ವಂದನೆಗಳನ್ನು ಸಲ್ಲಿಸಿ, ಮಂತ್ರಾಕ್ಷತೆ ಪಡೆಯಲಾಯಿತು. ನಮ್ಮ ಸಂಘದ ನಿರ್ದೇಶಕರು, ಸಮಾಜಬಾಂಧವರೆಲ್ಲರೂ ಗುರುಗಳವರಿಂದ ಮಂತ್ರಾಕ್ಷತೆ ಪಡೆದರು.



## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102.

### ಆಮಂತ್ರಣ

ಮಾನ್ಯ ಸಮಾಜಬಾಂಧವರೇ,

ಸ್ವಸ್ತಿ! ಶ್ರೀ ಶುಭಕೃತ್ ನಾಮ ಸಂವತ್ಸರದ ಕನ್ಯಾ ಮಾಸ ದಿನ ೧೩ ಸಲುವ ಆಶ್ವಯುಜ ಶುದ□೧೦ ಯು, ತಾ.05-10-2022ನೇ ಬುಧವಾರ

ವಿಜಯದಶಮಿ ದಿನದಂದು

**ಶ್ರೀ ಚಂಡಿಕಾಯಾಗ ಮತ್ತು ಶ್ರೀ ಶಾರದಾ ಪೂಜಾ**

ಕಾರ್ಯಕ್ರಮವು ಶ್ರೀ ಶಾರದಾ ಮಂಟಪದಲ್ಲಿ ಜರಗಲಿದೆ. ಸರ್ವರೂ ಬಂಧು-ಬಾಂಧವರೊಡಗೂಡಿ ಆಗಮಿಸಿ, ಆ ದಿನ ನಡೆಯಲಿರುವ ಎಲ್ಲಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಸಂಪನ್ನಗೊಳಿಸಬೇಕೆಂದು ಅಪೇಕ್ಷಿಸುತ್ತೇವೆ.

| ಕೆ.ಮಂಜುನಾಥ ಹೆಬ್ಬಾರ್ | ಕೆ. ಗಣೇಶ ಹೆಬ್ಬಾರ್ | ಪಿ. ಪ್ರಭಾಕರ ಭಂಡಿ |
|---|---|---|
| ಅಧ್ಯಕ್ಷರು | ಕೋಶಾಧಿಕಾರಿ | ಕಾರ್ಯದರ್ಶಿ |

ವಿ.ಸೂ : ಈ ವರ್ಷವೂ ನವರಾತ್ರಿಯಲ್ಲಿ ತಾ.26.09.2022ರಿಂದ ತಾ.04.10.2022ರ ವರೆಗೆ ಪ್ರತೀ ದಿನ ಸಂಜೆ ಶ್ರೀ ಶಾರದಾ ದೇವಸ್ಥಾನದಲ್ಲಿ ದುರ್ಗಾನಮಸ್ಕಾರ ಪೂಜೆಯನ್ನು ಏರ್ಪಡಿಸಲಾಗುವುದು. ದುರ್ಗಾನಮಸ್ಕಾರ ಸೇವೆಯ ಕರ್ತೃಗಳಾಗಬಯಸುವವರಿಗೆ ರೂ.5000 ಸೇವಾದರ ನಿಗದಿಪಡಿಸಲಾಗಿದೆ. ಆಸಕ್ತ ಭಕ್ತರು ವಿವರಗಳಿಗಾಗಿ ಕಾರ್ಯದರ್ಶಿ ಶ್ರೀ ಪ್ರಭಾಕರ ಭಂಡಿ, ಪೆರ್ಡೂರು 9449254846ರನ್ನು ಸಂಪರ್ಕಿಸಬೇಕಾಗಿ ಕೋರುತ್ತೇವೆ.

## ಶ್ರೀ ಶಾರದಾ ಮಂಟಪದಲ್ಲಿ ಆಟಿಡೊಂಜಿ ದಿನ



ದಿನಾಂಕ 15.08.2022ರಂದು ಸಾಯಂಕಾಲ 5.00 ಗಂಟೆಗೆ ಆಟಿಡೊಂಜಿ ದಿನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಆಗಮಿಸಿದ ಸಮಾಜ ಬಾಂಧವರಿಗೆ ಫಲಹಾರದ ವ್ಯವಸ್ಥೆ ಮಾಡಲಾಗಿತ್ತು. ಫಲಹಾರದಲ್ಲಿ ಚರುಮುರಿ, ಹಲಸಿನ ಹಪ್ಪಳ ಮತ್ತು ಚಾ, ಕಾಫಿ ವ್ಯವಸ್ಥೆ ಮಾಡಲಾಗಿತ್ತು. ತದನಂತರ ಸಮಾಜ ಬಾಂಧವರಿಗಾಗಿ ಆಟಿ ಆಟಗಳಾದ ಚೆನ್ನಮಣೆ, ಕೇರಂ, ಚೆಸ್, ಲೂಡೋ ವ್ಯವಸ್ಥೆ ಮಾಡಲಾಗಿತ್ತು. ಸರಿ ಸುಮಾರು 150 ರಿಂದ 200 ಜನ ಸಮಾಜಬಾಂಧವರು ಆಟಗಳನ್ನು ಆಡಿ ಸಂತೋಷಪಟ್ಟರು. ಆಟಿಡೊಂಜಿ ದಿನ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ವೆಂಕಟರಮಣ ರಾವ್ ಕುಡಾಲ್ ಮತ್ತು ಡಾ। ಅಮರನಾಥ್ ಶಾಸ್ತ್ರಿ ಮಕ್ಕಳ ತಜ್ಞರು ಸಿಂಗಾರವನ್ನು ಬಿಡಿಸುವುದರೊಂದಿಗೆ ಗಿಡಗಳಿಗೆ ನೀರು ಹಾಕಿ ಉದ್ಘಾಟಿಸಿದರು. ಶ್ರೀಮತಿ ನಿರ್ಮಲ ಹರಿಕೃಷ್ಣ ಇವರು ಆಟಿಯ ಮಹತ್ವದ ಬಗ್ಗೆ ಒಂದೆರಡು ಮಾತುಗಳನ್ನಾಡಿದರು. ಉದ್ಘಾಟನಾ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ಕಾರ್ಯದರ್ಶಿ ಶ್ರೀ ಪಿ. ಪ್ರಭಾಕರ ಭಂಡಿ, ಉಪಾಧ್ಯಕ್ಷ ಶ್ರೀ ಯು. ಅರವಿಂದ ಕುಮಾರ್ ಮತ್ತು ಮಹಿಳಾ ವಿಭಾಗದ ಡಾ। ವಿಜಯ ಉಪಸ್ಥಿತರಿದ್ದರು. ಕೋಶಾಧಿಕಾರಿ ಶ್ರೀ ಕೆ.ಗಣೇಶ್ ಹೆಬ್ಬಾರ್ ಧನ್ಯವಾದವಿತ್ತರು.

ತದನಂತರ ನಡೆದ ಊಟ ಉಪಚಾರದಲ್ಲಿ ಆಟಿಯ ಬಗೆಬಗೆಯ ಖಾದ್ಯಗಳನ್ನು ತಯಾರು ಮಾಡಲಾಗಿತ್ತು. ಊಟಕ್ಕೆ ಮಿಡಿ ಉಪ್ಪಿನಕಾಯಿ, ಹುರುಳಿ ಚಟ್ನಿ, ಕೊತ್ತಂಬರಿ ಸೊಪ್ಪು ಚಟ್ನಿ, ಹಲಸಿನ ಸೊಳೆಯ ಪಲ್ಯ, ಹುರುಳಿಯ ಪಲ್ಯ, ಪತ್ರೊಡೆ, ಅರಶಿನ ಎಲೆ ಗಟ್ಟಿ, ಕುಚ್ಚಿಗೆ ಅನ್ನ, ಹುರುಳಿ ಸಾರು, ಸೌತೆ ಹಲಸಿನ ಸೊಳೆ ಸಾಂಬಾರು, ಹಲಸಿನ ಗಟ್ಟಿ, ಕಾರಕಡ್ಡಿ, ಹಲಸಿನ ಅಪ್ಪ, ಶಾವಿಗೆ, ಮೆಣಸುಕಾಯಿ, ಕಾಯಿಹಾಲು, ಹಾಲುಬಾಯಿ, ಗೆಣಸಿನ ಪಾಯಸ, ಮಜ್ಜಿಗೆ ಇತ್ಯಾದಿ ಖಾದ್ಯಗಳನ್ನು ಸಿದ್ಧಪಡಿಸಲಾಗಿತ್ತು. ಸುಮಾರು 250ಕ್ಕೂ ಅಧಿಕ ಜನ ಸಮಾಜ ಬಾಂಧವರು ಊಟವನ್ನು ಸವಿದರು. ಊಟವನ್ನು ಬಡಿಸುವ ಕಾರ್ಯದಲ್ಲಿ ನಮ್ಮ ಸಮಾಜಬಾಂಧವರು ಸಹಕರಿಸಿದರು. ಹೀಗೆ ಆಟಿಡೊಂಜಿ ದಿನ ಕಾರ್ಯಕ್ರಮವು ಅವಿಸ್ಮರಣೀಯವಾಗಿ ಆಚರಿಸಲಾಗಿತ್ತು.

# ಶ್ರೀ ಶಾರದಾ ಮಂಟಪದಲ್ಲಿ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಆಚರಣೆ








ತಾ.13.08.2022ರಂದು ಶ್ರೀ ಶಾರದಾ ಮಂಟಪದ ವಠಾರದಲ್ಲಿ ಬೆಳಿಗ್ಗೆ 9.00 ಗಂಟೆಗೆ ಸ್ವಾತಂತ್ರ್ಯ ಅಮೃತ ಮಹೋತ್ಸದ ಪ್ರಯುಕ್ತ ಧ್ವಜಾರೋಹಣದ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಂಜುನಾಥ ಹೆಬ್ಬಾರ್, ಕಾರ್ಯದರ್ಶಿ ಪ್ರಭಾಕರ ಭಂಡಿ, ಕೋಶಾಧಿಕಾರಿ ಗಣೇಶ್ ಹೆಬ್ಬಾರ್ ಮತ್ತು ಸಂಘದ ಪದಾಧಿಕಾರಿಗಳು, ನಿರ್ದೇಶಕರು, ಸಮಾಜಬಾಂಧವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಬಳಿಕ ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು. ಸ್ವಾತಂತ್ರ್ಯೋತ್ಸವದ ಅಮೃತೋತ್ಸವದ ಪ್ರಯುಕ್ತ ಕೇಸರಿ, ಬಿಳಿ, ಹಸಿರು ಬಣ್ಣದ ವಿದ್ಯುತ್ ದೀಪಾಲಂಕಾರವನ್ನು ಶ್ರೀ ಶಾರದಾ ಮಂಟಪಕ್ಕೆ ಅಳವಡಿಸಲಾಗಿತ್ತು. ತಾ.15.08.2022ರವರೆಗೆ ಶ್ರೀ ಶಾರದಾ ಮಂಟಪವು ತ್ರಿವರ್ಣ ಧ್ವಜ ಮತ್ತು ವಿದ್ಯುತ್ ದೀಪಾಲಂಕಾರಗಳಿಂದ ಕಂಗೊಳಿಸುತ್ತಿತ್ತು.

**ಸಂಪಾದಕ ಮಂಡಳಿ**

ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ| ಶ್ರೀಮತಿ ವಿಜಯ ರಾವ್ ವೈ.ಬಿ.

★★★★ ★★★★

ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ

## ಶ್ರೀ ಕೃಷ್ಣ ಕುಮಾರ್ ರಾವ್ ಮಟ್ಟು ಇವರಿಗೆ "ವಿಪ್ರ ಶಿಕ್ಷಕ" ಪ್ರಶಸ್ತಿ



ಬ್ರಾಹ್ಮಣ ಮಹಾ ಸಭಾ ಕೊಡವೂರು(ರಿ.) ಇವರು ಶಿಕ್ಷಕ ದಿನಾಚರಣೆ ಅಂಗವಾಗಿ ಕೊಡವೂರಿನ ವಿಪ್ರ ಶ್ರೀ ಕಲಾಭವನದಲ್ಲಿ ದಿನಾಂಕ 04-08-2022ರಂದು 'ಗುರು ವಂದನಾ' ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕ ಶ್ರೀ ಕೃಷ್ಣ ಕುಮಾರ್ ರಾವ್ ಮಟ್ಟು ಇವರನ್ನು "ವಿಪ್ರ ಶಿಕ್ಷಕ" ಬಿರುದು ನೀಡಿ ಗೌರವಿಸಿದರು.

ಮುಖ್ಯ ಅತಿಥಿಗಳಾಗಿ ಆದಿ ಉಡುಪಿ ಪ್ರೌಢಶಾಲಾ ನಿವೃತ್ತ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಬಿ. ಶಂಕರಿ ಭಟ್, ಅಧ್ಯಕ್ಷ ಶ್ರೀನಿವಾಸ ಉಪಾಧ್ಯಾಯ, ಕಾರ್ಯದರ್ಶಿ ಪೂರ್ಣಿಮಾ ಜನಾರ್ದನ್, ಕೋಶಾಧಿಕಾರಿ ಶ್ರೀಧರ ಶರ್ಮ, ಪದಾಧಿಕಾರಿಗಳಾದ ರೋಹಿಣಿ, ಭಾರತಿ ಕೊಡವೂರು ಮೊದಲಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಉದ್ಯಾವರ ಹಿಂದೂ ಹಿರಿಯ ಪ್ರಾಥಮಿಕ ಶಾಲೆಯ ವತಿಯಿಂದ ಶಿಕ್ಷಕ ದಿನಾಚರಣೆ ಅಂಗವಾಗಿ ದಿನಾಂಕ 05.09.2022ರಂದು ಶ್ರೀ ಕೃಷ್ಣ ಕುಮಾರ್ ರಾವ್ ಮಟ್ಟುರವರನ್ನು ಅವರ ಮನೆಯಲ್ಲಿ ಗೌರವಿಸಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶಾಲಾ ಸಂಚಾಲಕ ಸುರೇಶ್ ಶೆಣೈ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಗಣೇಶ್ ಕುಮಾರ್, ಶಾಲಾ ಶಿಕ್ಷಕ-ರಕ್ಷಕ ಸಂಘದ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ದೇವೇಂದ್ರ ಮೊದಲಾದವರು ಉಪಸ್ಥಿತರಿದ್ದರು.

## "ಸಾವಿತ್ರಿ ಮನೋಹರರಿಗೆ ಅರಿಸದೆ ಬಂದ ಆರ್ಯಭಟ ಪ್ರಶಸ್ತಿ"



ಸಾಹಿತ್ಯ ಕ್ಷೇತ್ರ ಮತ್ತು ಭಾರತ್ ಸ್ಕೌಟ್ಸ್ ಗೈಡ್ಸ್ ಸಂಸ್ಥೆಯಲ್ಲಿ ಕಳೆದ 37 ವರ್ಷಗಳಿಂದ ಸಮರ್ಪಣಾ ಭಾವದಿಂದ ದುಡಿಯುತ್ತ, ತಾಲೂಕು ಉಪಾಧ್ಯಕ್ಷರಾಗಿ, ಜಿಲ್ಲಾ ಸಂಸ್ಥೆಯ ತರಬೇತಿ ಆಯುಕ್ತರಾಗಿ, ರಾಷ್ಟ್ರೀಯ ತರಬೇತುದಾರರಾಗಿ ನಿಷ್ಕಾಮ ಸೇವೆ ಸಲ್ಲಿಸುತ್ತ, ತನು, ಮನ, ಧನ ಸಹಾಯ ನೀಡುತ್ತಿರುವ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ರಾಜ್ಯ, ರಾಷ್ಟ್ರ ಮಟ್ಟದ ಪ್ರಶಸ್ತಿ, ಸನ್ಮಾನ ಪಡೆದ ನಿವೃತ್ತ ಪ್ರೌಢ ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸಾವಿತ್ರಿ ಮನೋಹರ್‌ರವರಿಗೆ "ಆರ್ಯಭಟ ರಾಷ್ಟ್ರೀಯ ಪ್ರಶಸ್ತಿ" ನೀಡಿ ಗೌರವಿಸಲಾಯಿತು. ಅವರ ಪರವಾಗಿ ಅವರ ಮಗಳು ಪ್ರೊಫೆಸರ್ ಸ್ವಾತಿ ಶರ್ಮ ಗಣ್ಯರ ಉಪಸ್ಥಿತಿಯಲ್ಲಿ ಪ್ರಶಸ್ತಿ ಸ್ವೀಕರಿಸಿದರು.



ಮೂಡಬಿದ್ರಿ ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ ಇದರ ವತಿಯಿಂದ ಶೃಂಗೇರಿ ಶ್ರೀ ಗುರುಗಳ ಭೇಟಿ ನೀಡಿದ ಸಂದರ್ಭ.

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
ಸಂಘದ ಪ್ರಾಥಮಿಕ ಸದಸ್ಯರಿಗೆ 10.00%
(ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 11.5% |

ಆಭರಣ ಸಾಲಕ್ಕೆ ಯಾವುದೇ ಸೇವಾ ಶುಲ್ಕ, ತೆರಿಗೆ ಇರುವುದಿಲ್ಲ.

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ
ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114) ಬ್ರಹ್ಮಾವರ ಶಾಖೆ (☎ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ



*Dr. Sanath S. Rao*
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CLINIC**
1ST FLOOR, SAI HARSHA SQUARE, KOLADAPETE (THENKAPETE), OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.



ಡಾ| ವಿಜಯಾ ರಾವ್ ವೈ.ಬಿ
ಹೆರಿಗೆ ಹಾಗೂ ಸ್ತ್ರೀರೋಗ ತಜ್ಞರು

**Dr. Vijaya Rao Y.B.**
MBBS DGO (DNB)
Consultant Obst. & Gynaecologist
Reg. No. 34499
Mobile : 9481230608
Email : vijayayb12@gmail.com

Indrani Maternity Clinic, Aisiri Complex,
Near Railway Station Bus Stop, Kunjibettu Post, Udupi - 576 102

# ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576 102

ಶಾರದಾ ಶಾರದಾಂಭೋಜವದನಾ ವದನಾಂಬುಜೇ । ಸರ್ವದಾಸರ್ವದಾSಸ್ಮಾಕಂ ಸನ್ನಿಧಿಂ ಸನ್ನಿಧಿಂ ಕ್ರಿಯಾತ್ ॥

## ಶ್ರೀ ಶಾರದಾ ದೇವಸ್ಥಾನದಲ್ಲಿ ನವರಾತ್ರಿ ವಿಶೇಷ ಪೂಜೆಗಳು

ತಾ.26-09-2022ರಿಂದ 04-10-2022ರ ವರೆಗೆ ನವರಾತ್ರಿಯ ಪ್ರತೀ ದಿನ ಶ್ರೀ ದೇವಸ್ಥಾನದಲ್ಲಿ ಮಧ್ಯಾಹ್ನ 12-30ಕ್ಕೆ ಹಾಗೂ ಸಂಜೆ ದುರ್ಗಾನಮಸ್ಕಾರ ಮತ್ತು ರಾತ್ರಿ ಗಂಟೆ 8-00ಕ್ಕೆ ವಿಶೇಷ ಪೂಜೆ ನಡೆಯಲಿರುವುದು.
ಭಕ್ತಾದಿಗಳು ಪ್ರತಿದಿನ ಪೂಜಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ವಿನಂತಿ.

- ಆಡಳಿತ ಮಂಡಳಿ

# ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102

## ನವರಾತ್ರಿ ಉತ್ಸವದ ಪ್ರಯುಕ್ತ ನಡೆಯಲಿರುವ ಸಾಂಸ್ಕೃತಿಕ ಸ್ಪರ್ಧೆಗಳು

ತಾ.05-10-2022ನೇ ಬುಧವಾರ ಪೂರ್ವಾಹ್ನ ಗಂಟೆ 9.00 ರಿಂದ ನಮ್ಮ ಸಮಾಜ ಬಾಂಧವರಿಗಾಗಿ ಈ ಕೆಳಗಿನ ಸ್ಪರ್ಧೆಗಳು ನಡೆಯಲಿವೆ.

| ಸ್ಪರ್ಧೆಗಳು | ವಿಭಾಗಗಳು | | | ಅವಧಿ |
|---|---|---|---|---|
| **ಭಕ್ತಿಗೀತೆ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-8ನೇ ತರಗತಿಯವರೆಗೆ | 9ನೇ ತರಗತಿಯಿಂದ ಪದವಿಪೂರ್ವ ತರಗತಿಯವರೆಗೆ | 4 ನಿಮಿಷ |
| | (ಯಾವುದೇ ರೀತಿಯ ಸಂಗೀತ ಉಪಕರಣ ಉಪಯೋಗಿಸಬಾರದು.) | | | |
| **ಚಿತ್ರರಚನೆ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ (ಯಾವುದೇ ಚಿತ್ರ) | 5-8ನೇ ತರಗತಿಯವರೆಗೆ (ನಮ್ಮೂರ ಜಾತ್ರೆ) | 9ನೇ ತರಗತಿಯಿಂದ ಪದವಿಪೂರ್ವ ತರಗತಿಯವರೆಗೆ (ಪ್ರಕೃತಿ ವಿಕೋಪ) | 60 ನಿಮಿಷ |
| **ರಂಗವಲ್ಲಿ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-8ನೇ ತರಗತಿಯವರೆಗೆ | 9ನೇ ತರಗತಿಯಿಂದ ಮೇಲ್ಪಟ್ಟು ಎಲ್ಲರಿಗೂ | 60 ನಿಮಿಷ |
| | (3×3 ಅಡಿ ಸ್ಥಳಾವಕಾಶದಲ್ಲಿ ಚುಕ್ಕೆ ಹಾಕಿ ರಂಗವಲ್ಲಿ-ಯಾವುದೇ ಪರಿಕರಣಗಳನ್ನು ಉಪಯೋಗಿಸಬಾರದು) | | | |
| **ಕಂಠಪಾಠ** | 4ನೇ ತರಗತಿಯವರೆಗೆ - ಗಣೇಶ ಪಂಚರತ್ನ | 5-8ನೇ ತರಗತಿಯವರೆಗೆ - ಗಣೇಶ ಪಂಚರತ್ನ | | |
| **ಶಂಖ ಊದುವುದು** (ಮುಕ್ತ ಅವಕಾಶ) | ಶಂಖಗಳನ್ನು ಸ್ಪರ್ಧಿಗಳೇ ತರಬೇಕು | | | |
| **ಚೂರ್ಣಿಕೆ** | ಎಲ್ಲಾ ವಯೋಮಾನದವರಿಗೆ | | | |

ವಿಶೇಷ ಸೂಚನೆಗಳು :
1) ಆಸಕ್ತ ಸ್ಪರ್ಧಾಳುಗಳು ಅದೇ ದಿನ ಬೆಳಿಗ್ಗೆ 8.30ಕ್ಕೆ ಹಾಜರಿದ್ದು ತಮ್ಮ ಹೆಸರನ್ನು ನೋಂದಾಯಿಸಿ ಕೊಳ್ಳಬೇಕು, ಕಡ್ಡಾಯವಾಗಿ ಬೆಳಿಗ್ಗೆ 9-30ಕ್ಕೆ ಸ್ಪರ್ಧೆಗಳು ಪ್ರಾರಂಭವಾಗಲಿವೆ
2) ರಂಗವಲ್ಲಿಗೆ ಬಣ್ಣದ ಹುಡಿ ಮತ್ತು ಚಿತ್ರ ರಚನೆಗೆ ಕಾಗದ ಹಾಳೆಗಳನ್ನು ಒದಗಿಸಲಾ ಗುವುದು. ಬೇಕಾದ ಇತರ ಪರಿಕರಗಳನ್ನು ಸ್ಪರ್ಧಾಳುಗಳೇ ತರಬೇಕು.
3) ಹೆಚ್ಚಿನ ನಿಯಮಗಳನ್ನು ಸ್ಪರ್ಧೆ ಆರಂಭವಾಗುವ ಮೊದಲು ಸ್ಪರ್ಧಾಳುಗಳಿಗೆ ತಿಳಿಸಲಾಗುವುದು.
4) ಕನಿಷ್ಠ 3 ಜನ ಸ್ಪರ್ಧಿಗಳು ಇಲ್ಲದಿದ್ದಲ್ಲಿ ಸ್ಪರ್ಧೆ ನಡೆಸುವ ಅಥವಾ ಬಿಡುವ ನಿರ್ಧಾರ ವ್ಯವಸ್ಥಾಪಕರದ್ದು.
5) ಫಲಿತಾಂಶ ನಿರ್ಣಯದಲ್ಲಿ ನಿರ್ಣಾಯಕರ ತೀರ್ಮಾನವೇ ಅಂತಿಮ.

2-30ರಿಂದ ಸಭಾಕಾರ್ಯಕ್ರಮ, ಪ್ರತಿಭಾ ಪುರಸ್ಕಾರ, ಬಹುಮಾನ ವಿತರಣೆ, ವಿದ್ಯಾರ್ಥಿವೇತನ ವಿತರಣೆ ಮತ್ತು ಮಹಿಳಾ ವೇದಿಕೆಯಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿರುವುದು.

**ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು, ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ ಇವರಿಂದ ಯಕ್ಷಗಾನ :**
**''ಸುದರ್ಶನ ವಿಜಯ'' ಸಮಯ: ಸಂಜೆ 4-30ರಿಂದ**

-ಅಧ್ಯಕ್ಷರು, ಕಲೆ ಮತ್ತು ಸಾಂಸ್ಕೃತಿಕ ವೇದಿಕೆ


*With Best Complimemts From*
SRI M. SHAILESH RAO B.E., Civil
Ph : 9448624324
Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com


## ಅಕ್ಷರಗಳನ್ನು ಸರಿಯಾಗಿ ಜೋಡಿಸಿ ಸರಿಯಾದ ಗೀತೆ ರಚಿಸಿ



ತಯಾರಿಸಿದವರು :
ಹರೀಶ್ ಹೆಬ್ಬಾರ್ ಹವರಾಲು
9663028751

1) ಗೆ।ರ।ಣ।ಕಾ।ನಾ।ಕಾ।ಣ್ಣಿ।ಕ।ಟ।ಕ।ದ।
2) ಮ।ಲ।ದ।ಕ।ಲೋ।ಯ।ನಾ।ವೆ।ಈ।
3) ಭಾ।ಗಿ।ವಾ।ಜೇ।ಹೂ।ನಾ।ವ।ದೆ।ಜೀ।ದೆ।ವ।ಗಿ।
4) ದು।ನ।ಗಿ।ವು।ನು।ನಿ।ಂ।ತ।ವು।ದೆ।ಇ।ಂ।ಮ।ದಾ।
5) ದು।ತ।ಆ।ಕು।ಗ।ಕ।ದು।ಳಿ।ಕೈ।ರೆ।ಟ್ಟಿ।ಎ।ಂ।
6) ದ।ಆ।ನೇ।ತಿ।ದ್ಯಾ।ಪ್ರೀ।ಸ್ತಿ।ವು।ಆ।ತ।ಂ।
7) ಡು।ಲೇ।ವಿ।ನು।ಗೊ।ಡ।ನ।ಒ।ಕೊ।ಉ।ಲ।ರೆ।
8) ರ।ವ।ಯಾ।ಡಿ।ಹೂ।ಗೊ।ಮು।ಯಾ।ವು।
9) ಲ।ಯ।ಒ।ವ।ಸೆ।ಭಾ।ಆ।ಜೀ।ವಿ।ವ।ನ।
10) ನು।ಯ।ಂ।ಳ।ದ।ರ।ತೆ।ನೆ।ತೆ।ಕಾ।ಲ।ಣ।

ವಾಟ್ಸ್ ಆ್ಯಪ್ ಮೂಲಕ ಉತ್ತರವನ್ನು ನೀಡಿ. ವಾಟ್ಸಾಪ್ ನಂ.9663028751 ಮೊದಲ ಹತ್ತು ಜನರ ಹೆಸರನ್ನು ಮುಂದಿನ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ಆಗಸ್ಟ್ ತಿಂಗಳ ಜೋಡಿಸಿ ಬರೆಯಿರಿ ಪ್ರಶ್ನೆಗಳಿಗೆ ಉತ್ತರ :
1. ಆನಂದಮಯ ಈ ಜಗ ಹೃದಯ 2. ನೀನೆಲ್ಲೆ ನಡೆವೆ ದೂರ 3. ನೂರೊಂದು ನೆನಪು ಎದೆಯಾಳದಿಂದ 4. ಆ ಮೋಡ ಬಾನಲ್ಲಿ ತೇಲಾಡುತ 5. ಹೊಸ ಬಾಳಿಗೆ ನೀ ಜೊತೆಯಾದೆ 6. ಆಕಾಶದಿಂದ ಧರೆಗಿಳಿದ ರಂಭೆ 7. ನಿಂಬಿಯ ಬನಾದ ಮ್ಯಾಗಳ 8. ಜೇನಿನ ಹೊಳೆಯೋ ಹಾಲಿನ ಮಳೆಯೋ 9. ಎಲ್ಲೆಲ್ಲಿ ನೋಡಲಿ ನಿನ್ನನ್ನೇ ಕಾಣುವೆ 10. ಹಸಿರು ಗಾಜಿನ ಬಳೆಗಳೆ

ಪ್ರಶ್ನೆಗೆ ವೇಗವಾಗಿ ಉತ್ತರ ನೀಡಿದವರು :
1) ಶೋಭಾ ರಾವ್, ಹವರಾಲು 2) ಎಸ್. ಪದ್ಮಲತಾ, ಹಿರಿಯಡ್ಕ 3) ಎಂ.ಮಂಜುನಾಥ ಹೆಬ್ಬಾರ್, ಬೆಳಂಜೆ 4) ಎಚ್. ಮಲ್ಲಿಕಾರ್ಜುನ ರಾವ್, ಕಾಪು 5) ಕೃಷ್ಣಮೂರ್ತಿ, ಬ್ರಹ್ಮಾವರ 6) ಸುಮಲತಾ ರಾವ್, ಪಡುಬಿದ್ರಿ 7) ಮೀನಾಕ್ಷಿ ಹೆಬ್ಬಾರ್, ಹೆಬ್ರಿ 8) ಸುಹಾಸಿನಿ ರಾವ್, ನಾರಾವಿ 9) ನಾಗರತ್ನ ಹೆಬ್ಬಾರ್, ಅಬ್ಲಿಕಟ್ಟೆ 10) ರೇಣುಕಾ ರಾವ್, ನಾರಾವಿ




ಎಮ್. ದೇವಾನಂದ್ ಭಟ್
Cell : 9845644556
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೋ



ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655

Ph : 98459 92859
**Ganesh Hebbar & Associates**
CHARTERED ACCOUNTANT
S.M.S.P. Complex, Udupi - 576 101.

**Buying and selling shares as easy as checking your emails**
**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

**ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 576 102.**

### 2022-23ನೇ ಸಾಲಿನ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಸಮಾಜದ ಹೆತ್ತವರು/ಪೋಷಕರು ಮೇಲಿನ ಸಂಘದ ಸದಸ್ಯರಾಗಿದ್ದು ಅವರ ಮಕ್ಕಳು ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್, ಬಿ.ಎಡ್, ಡಿಪ್ಲೊಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿದ್ದು, ಹೆತ್ತವರ ವಾರ್ಷಿಕ ಆದಾಯವು ರೂ.3,00,000/-ಕ್ಕೆ ಮೀರದ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಸಂಘದ ವಿದ್ಯಾರ್ಥಿವೇತನ ಅರ್ಜಿ ಫಾರಂ(ಶ್ರೀ ಶಾರದಾ ಮಂಟಪದಲ್ಲಿ ಲಭ್ಯವಿದೆ)ನ್ನು ಪೂರ್ಣ ಪ್ರಮಾಣದಲ್ಲಿ ಭರ್ತಿಗೊಳಿಸಿ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿಯೊಂದಿಗೆ ದಿನಾಂಕ 25.09.2022 ರೊಳಗೆ ಶ್ರೀ ಶಾರದಾ ಮಂಟಪಕ್ಕೆ ತಲುಪಿಸಬೇಕು.

**- ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

### ಡಾ| ದಯಾನಂದ ಎಸ್.ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**2022-2023**

ಡಾ| ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ''ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ''ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. **2022-2023ನೇ** ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ** ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು **ಕೈಬರಹದಲ್ಲಿ ಅರ್ಜಿ ಫಾರಂ ಬರೆದು ಪೋಷಕರ ಸಹಿಯೊಂದಿಗೆ,** ಪರೀಕ್ಷೆಯ ಅಂಕಪಟ್ಟಿ ಹಾಗೂ ವ್ಯಾಸಂಗ ಪ್ರಮಾಣ ಪತ್ರ, ಬ್ಯಾಂಕ್ ಖಾತೆಯ ವಿವರಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ **ತಾ.25-09-2022**ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳೂ ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ (ಫೋನ್ : 0820-2522408)ಯಲ್ಲಿ ವಿಚಾರಿಸಬಹುದು.**

**-ಅಧ್ಯಕ್ಷರು, ವಿದ್ಯಾರ್ಥಿ ವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

### ಅಂಬಲ್ಪಾಡಿ ಕೃಷ್ಣ ರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ 2022-2023

**ಉಡುಪಿ ಮತ್ತು ದ.ಕ. ಜಿಲ್ಲೆಗಳ** ವಿಶ್ವವಿದ್ಯಾಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ ಎಲ್ಲಾ ವಿಷಯಗಳಲ್ಲಿ ರ್‍ಯಾಂಕ್ ಗಳಿಸಿದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ್‍ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರ, ಬ್ಯಾಂಕ್ ಖಾತೆಯ ವಿವರಗಳೊಂದಿಗೆ **ತಾ.25-09-2022**ರೊಳಗೆ **ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ** ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ.

**- ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

### ಉದಯಚಂದ್ರ ಪ್ರತಿಭಾ ಪುರಸ್ಕಾರ 2022-2023

ಸಂಘದ ಯುವವೇದಿಕೆಯ ಆಶ್ರಯದಲ್ಲಿ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ** ನಮ್ಮ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರ ನೀಡಲಾಗುವುದು. **2021-22ನೇ** ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪದವಿಪೂರ್ವ ಮೂರು ವಿಭಾಗಗಳಲ್ಲಿ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಒಬ್ಬೊಬ್ಬ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ಅಂಕಪಟ್ಟಿಯ ಪ್ರತಿ, ವಿಳಾಸ, ಫೋನ್ ನಂಬ್ರ, ಬ್ಯಾಂಕ್ ಖಾತೆಯ ವಿವರಗಳೊಂದಿಗೆ ಅರ್ಜಿಯನ್ನು **ಅಧ್ಯಕ್ಷರು, ಯುವವೇದಿಕೆ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು ಉಡುಪಿ - 576 102** ಇಲ್ಲಿಗೆ ತಾ.25-09-2022ರೊಳಗೆ ಕಳುಹಿಸಿ ಕೊಡಬೇಕು.

**- ಅಧ್ಯಕ್ಷರು, ಯುವ ಮತ್ತು ಕ್ರೀಡಾ ವೇದಿಕೆ.**

## ದಿ| ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ ಕುಳಾಯಿ

**ಕೋಂ.ಕೆ. ಸದಾಶಿವ ಶಾಸ್ತ್ರಿ, 3-68(7), ಶ್ರೀ ವಿಷ್ಣುಮೂರ್ತಿ ದೇವಸ್ಥಾನ ರಸ್ತೆ, ಕುಳಾಯಿ-575019. ಮೊ : 8762235801.**

### ಪ್ರತಿಭಾ ಪುರಸ್ಕಾರ

2021-22ರ ಸಾಲಿನ ಶೈಕ್ಷಣಿಕ ವರ್ಷದ ಪ್ರೌಢಶಾಲಾ (ಎಸ್.ಎಸ್.ಎಲ್.ಸಿ.) ಮತ್ತು ಪದವಿ ಪೂರ್ವ ಶಿಕ್ಷಣದ ಅಂತಿಮ ಪರೀಕ್ಷೆಯಲ್ಲಿ (ಪಿ.ಯು.ಸಿ.) ವಿಶಿಷ್ಟ ಶ್ರೇಣಿಯಲ್ಲಿ (85% ಅಧಿಕ) ತೇರ್ಗಡೆಯಾದ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈರಸ್ತೆ, ಕರಂಗಲ್ಪಾಡಿ, ಮಂಗಳೂರು-4 ಇಲ್ಲಿ ತಾ.09.10.2022ರಂದು ದಸರಾ ಪ್ರಯುಕ್ತ ನಡೆಯುವ ನಾಡಹಬ್ಬದಂದು ಪ್ರತಿಷ್ಠಾನದ ವತಿಯಿಂದ ಅಭಿನಂದಿಸಲಾಗುವುದು. ದ.ಕ. ಮತ್ತು ಉಡುಪಿ ಜಿಲ್ಲಾ ಅರ್ಹ ಆಸಕ್ತ ವಿದ್ಯಾರ್ಥಿ/ವಿದ್ಯಾರ್ಥಿನಿಯರು ತಮ್ಮ ಅಂಕ ಪಟ್ಟಿಯ ಯಥಾ ನಕಲು, ವಿಳಾಸ, ದೂರವಾಣಿ ಸಂಖ್ಯೆ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಇತ್ಯಾದಿಗಳನ್ನು **ತಾ.20.09.2022**ರ ಒಳಗಾಗಿ ಮೇಲ್ಕಾಣಿಸಿದ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ.

**-ಕೆ. ಸದಾಶಿವ ಶಾಸ್ತ್ರೀ, 8762235801**

## ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**ಉಡುಪಿ ಕುಕ್ಕಿಕಟ್ಟೆಯ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.)** ವತಿಯಿಂದ **2022-23ನೇ** ಸಾಲಿನ **ದಿ| ಡಾ| ವೈ. ಚಂದ್ರಶೇಖರರಾವ್ ಸ್ಮಾರಕ ವಿದ್ಯಾರ್ಥಿವೇತನಕ್ಕಾಗಿ** ಪ್ರತಿಭಾನ್ವಿತ ಹಾಗೂ ಆರ್ಥಿಕ ಸಹಾಯ ಅಗತ್ಯವಿರುವ ತಾಂತ್ರಿಕ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗಾಗಿ **ದಿ| ಸಾತ್ವಿಕ್ ಶಾಸ್ತ್ರಿ ಸ್ಮಾರಕ ವಿದ್ಯಾರ್ಥಿವೇತನಕ್ಕಾಗಿಯೂ** ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಕೈಬರಹದ ಅರ್ಜಿಯಲ್ಲಿ ತಮ್ಮ ವಿವರಗಳೊಂದಿಗೆ ಆದಾಯ ಹಾಗೂ ವ್ಯಾಸಂಗ ದೃಢಪತ್ರಿಕೆಗಳನ್ನು ಲಗತ್ತಿಸಿರಬೇಕು. ತಂದೆ-ತಾಯಿಯರ ವೃತ್ತಿ, ವಿಳಾಸ, ದೂರವಾಣಿ ಸಂಖ್ಯೆ ಹಾಗೂ ನಿಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು (ಪಾಸ್ ಬುಕ್ಕಿನ ಮೊದಲ ಹಾಳೆಯ ಪ್ರತಿ) ಅರ್ಜಿಯಲ್ಲಿ ನಮೂದಿಸಿರಬೇಕು. ಕ್ರಮಬದ್ಧವಾಗಿ ಬರೆದ ಅರ್ಜಿಗಳನ್ನು ಮಾತ್ರ ಗಮನಿಸಲಾಗುವುದು. ಅರ್ಜಿ ಕಳುಹಿಸಲು ಕೊನೆಯ **ದಿನಾಂಕ 30-11-2022.** ಅರ್ಜಿಯನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

**ಡಾ| ವೈ.ಸುದರ್ಶನ ರಾವ್,**

ಇಂಚರ ಸರ್ಜಿಕಲ್ ಕ್ಲಿನಿಕ್. ಎ.ಜೆ.ಅಲ್ಸೆ ರಸ್ತೆ, ಪ್ರಸಾದ ನೇತ್ರಾಲಯದ ಎದುರು, ಉಡುಪಿ-576101

॥ ಶ್ರೀ ರಾಜರಾಜೇಶ್ವರೀ ಪ್ರಸನ್ನಾ ॥ ॥ ಶ್ರೀ ಗುರುಭ್ಯೋ ನಮಃ ॥

## ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ

**ಕೋಡಿಂಬಾಡಿ-574325, ಪುತ್ತೂರು ತಾಲೂಕು, ದಕ್ಷಿಣ ಕನ್ನಡ**

ಪ್ರಿಯ ಭಗವದ್ಭಕ್ತರೇ,

ಸ್ವಸ್ತಿ ಶ್ರೀ ಶುಭಕೃತ್ ಸಂವತ್ಸರದ ಅಶ್ವೀಜ ಶುಕ್ಲ ಪ್ರತಿಪತ್ತಿನಿಂದ ದಶಮಿಯವರೆಗೆ
(ದಿನಾಂಕ 26.09.2022ರಿಂದ 05.10.2022ರವರೆಗೆ)

### ಶರನ್ನವರಾತ್ರಿ ಉತ್ಸವ ಹಾಗೂ ಶ್ರೀ ಚಂಡಿಕಾ ಹೋಮ

ಕ್ಷೇತ್ರ ತಂತ್ರಿಗಳಾದ ಪಾವಂಜೆ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಲ್ಲಿ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿರುವುದು
ತಾವೆಲ್ಲರೂ ಆಗಮಿಸಿ ಶ್ರೀ ದೇವಿಯ ಪ್ರಸಾದವನ್ನು ಸ್ವೀಕರಿಸಿ
ಶ್ರೀದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ

**ಟಿ. ಅಣ್ಣಪ್ಪಯ್ಯ ತೆಂಕಿಲ,** ಅಧ್ಯಕ್ಷರು **ಎಂ.ನಾಗೇಶ್ ಶರ್ಮ,** ಅರ್ಚಕರು ಹಾಗೂ ಕಾರ್ಯದರ್ಶಿ
**ಆಡಳಿತ ಮಂಡಳಿ ಸರ್ವಸದಸ್ಯರು**

**(ದಿನಾಂಕ 26.09.2022ರಿಂದ 05.10.2022ರವರೆಗೆ
ಪ್ರತಿ ದಿನ ರಾತ್ರಿ 8.00 ಗಂಟೆಗೆ ರಂಗ ಪೂಜೆ ನಡೆಯಲಿರುವುದು)**


ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

## ಯಶಸ್ವೀ ಎಂಟರ್‌ಪ್ರೈಸೆಸ್

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

## ದೇವಿಕೃಪಾ ಏಜೆನ್ಸೀಸ್, ನಂದಿಕೂರು



ಫೋನ್ : 2556536 (R), 2555466 (O), Mobile : 9845149521

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

ಪ್ರೊ.: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ಶುಭಾಶಯಗಳೊಂದಿಗೆ

## ಹೆಬ್ಬಾರ್ ಎಂಟರ್‌ಪ್ರೈಸಸ್

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

## ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ತು (ರಿ.), ಮೂಡಬಿದಿರೆ, ದ.ಕ.

ಮೂಡಬಿದ್ರಿ ಸ್ಥಾನಿಕ ಬ್ರಾಹ್ಮಣ ಪರಿಷತ್ತು ಕಳೆದ 34 ವರುಷಗಳಿಂದ ಸತತವಾಗಿ ಯಶಸ್ವೀ ಕಾರ್ಯಕ್ರಮವನ್ನು ಅಯೋಜಿಸುತ್ತಾ ಬಂದಿದೆ. ಮೂಡಬಿದ್ರಿಯನ್ನು ಕೇಂದ್ರವಾಗಿರಿಸಿ ಕಟೀಲು, ಶಿರ್ತಾಡಿ, ಬೆಳ್ವಾಯಿ, ಕಾಂತಾವರ, ಅಳಿಯೂರ್, ಧರೆಗುಡ್ಡೆ, ಕೈಕಂಬ ಹೀಗೆ ನಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಸಮಾಜ ಬಾಂಧವರನ್ನು ಒಂದಾಗಿಸುವ ಈ ಪರಿಷತ್ತು ನಮ್ಮ ಸಮಾಜದ ಉತ್ತಮ ಸಂಘಟನೆ ಎಂದು ಎಲ್ಲರ ಅಭಿಮಾನ, ಗೌರವಗಳಿಗೆ ಪಾತ್ರವಾಗಿದೆ.

ವರ್ಷಕ್ಕೊಂದಾವೃತ್ತಿ ನಮ್ಮವರ ಎಲ್ಲಾ ಮನೆಗಳಿಗೆ ಭೇಟಿ ನೀಡಿ ಶೃಂಗೇರಿ ಜಗದ್ಗುರುಗಳ ಶ್ರೀ ಪೀಠಕ್ಕೆ ನಮ್ಮವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಂಪರ್ಕ ಸಾಧ್ಯವಾಗಿಸುವುದು, ಪ್ರತೀ ಗುರುವಾರ ಸಂಜೆ ಮಾತೆಯರಿಗೆ ಭಜನಾ ತರಬೇತಿ ನೀಡಿ ಪ್ರತೀ ತಿಂಗಳು ಒಂದು ದಿನ ನಮ್ಮವರ ಮನೆಯಲ್ಲಿ ಭಜನಾತಾಸ್ಸಂಗ ನೆರವೇರಿಸುವುದು, ಮಕ್ಕಳನ್ನು ಕಲೆಯಲ್ಲಿ ತೊಡಗುವಂತೆ ಪ್ರೇರೇಪಿಸುವುದು, ಉಪಾಕರ್ಮ, ಶಂಕರಜಯಂತಿ ಮೊದಲಾದ ಧಾರ್ಮಿಕ ಪೂಜಾ ಪ್ರಕ್ರಿಯೆ ನೆರವೇರಿಸುವುದು. ಧರ್ಮಜಾಗೃತಿಗಾಗಿ ಉಪನ್ಯಾಸ ನೆರವೇರಿಸುವುದು, ಸಮಾಜದ ವಿದ್ಯಾರ್ಥಿಗಳಿಗೆ ವಿದ್ಯಾಪೋಷಕ್ ಸಹಾಯಧನ ನೀಡಿ ಸಹಕರಿಸುವುದು, ಮಹಿಳಾ ಸಮಿತಿ, ಯುವ ಸಮಿತಿ ರಚಿಸಿ ಅವರಿಗೂ ವೇದಿಕೆ ಒದಗಿಸುವುದು, ಪ್ರತಿ ವರುಷವು ಆಟಿದಕೂಟ, ಆಟೋಟ ಸ್ಪರ್ಧೆ ಜರಗಿಸಿ ಮಕ್ಕಳು, ಮಹಿಳೆಯರಲ್ಲಿ ಇರುವ ಪ್ರತಿಭೆಗಳಿಗೆ ಅವಕಾಶ ಕಲ್ಪಿಸುವುದು, ಹಿರಿಯ ಸಾಧಕರನ್ನು ಗುರುತಿಸಿ ಗೌರವಿಸುವುದು, ಸಮಾಜದ ಎಲ್ಲಾ ದೇವಸ್ಥಾನಗಳ ಜೀರ್ಣೋದ್ಧಾರ, ಬ್ರಹ್ಮಕಲಶ ಮೊದಲಾದ ಧರ್ಮ ಕಾರ್ಯದಲ್ಲಿ ಬೆರೆತು ಸಹಕರಿಸುವುದು,

**ನಮ್ಮ ಮುಂದಿನ ಕಾರ್ಯ ಯೋಜನೆಗಳು......**

ಅಶಕ್ತರಿಗೆ ನೆರವು ನೀಡುವುದು, ಆರೋಗ್ಯ ಶಿಬಿರಗಳನ್ನು ಆಯೋಜಿಸುವುದು, ಮೂಡಬಿದ್ರೆಯ ಕೇಂದ್ರ ಭಾಗದಲ್ಲಿ ಸರಕಾರಿ ಜಾಗ ಗೊತ್ತುಪಡಿಸಿ ಅಲ್ಲಿ ಶ್ರೀಶಂಕರ ಸಮುದಾಯ ಭವನ ನಿರ್ಮಾಣ ಮಾಡುವುದು, ಹೀಗೆ ಎಲ್ಲಾ ಯೋಜನೆಗಳನ್ನು ಸಾಕಾರಗೊಳಿಸುವ ಕನಸು ನಮ್ಮದು.

–ಅಧ್ಯಕ್ಷರು, ಎಂ. ದೇವಾನಂದ ಭಟ್ ಬೆಳ್ವಾಯಿ.

### ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ತು ರಿ. ಮೂಡಬಿದಿರೆ, ದ. ಕ.

## 2022–2025ನೇ ಸಾಲಿನ ನೂತನ ಪದಾಧಿಕಾರಿಗಳು

*ಅಧ್ಯಕ್ಷರು :* ಎಂ. ದೇವಾನಂದ ಭಟ್, ಬೆಳ್ವಾಯಿ (ಅಧ್ಯಕ್ಷರು : ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ರಿ. ಮಂಗಳೂರು), *ಗೌರವಾಧ್ಯಕ್ಷರು :* ಬಿ. ಚಂದ್ರಶೇಖರ ರಾವ್. ಅಲಂಗಾರ್ (ನಿವೃತ್ತ ಜಿ. ಎಂ. ಕರ್ಣಾಟಕ ಬ್ಯಾಂಕ್ ಲಿ. ಮಂಗಳೂರು), *ಉಪಾಧ್ಯಕ್ಷರು :* 1) ಶ್ರೀಮತಿ ವಸುಧಾ ಸುರೇಶ್ ರಾವ್. ಲಾಡಿ (ಗ್ರಹಿಣಿ), 2) ಶ್ರೀನಿವಾಸ ರಾವ್ ಪುತ್ತಿಗೆ. (ಸಾಧಕ ಕೃಷಿಕ), 3) ಬಿ. ಕೆ. ರಾವ್ ಬೆಟ್ಕೇರಿ. (ಉದ್ಯಮಿ), *ಪ್ರಧಾನ ಕಾರ್ಯದರ್ಶಿ :* ಬಿ. ಸುರೇಶ್ ರಾವ್. ಬನ್ನಡ್ಕ (ಉದ್ಯಮಿ, ಸ್ಥಾಪಕಾಧ್ಯಕ್ಷ ಚೈತ್ರಾ ಕಲಾ ಆರ್ಟ್ಸ್), *ಸಹ ಕಾರ್ಯದರ್ಶಿ :* 1) ಮಂಜುನಾಥ್ ರಾವ್. ಕಟೀಲು (ಉದ್ಯಮಿ, ಮೆನೇಜರ್, ಈಶ್ ಮೋಟರ್ಸ್ ಮಗಳೂರು), 2) ವಾದಿರಾಜ್ ರಾವ್. ಪುತ್ತಿಗೆ (ಉದ್ಯಮಿ, ಮಾಜಿ ಪುತ್ತಿಗೆ ಪಂಚಾಯತ್ ಸದಸ್ಯರು), *ಕೋಶಾಧಿಕಾರಿ :* ಬಿ. ಕೆ ವಸಂತ ರಾಜ್. ಮಾಸ್ತಿ ಕಟ್ಟೆ (ಉಪನ್ಯಾಸಕರು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ), *ಸಂಘಟನಾ ಕಾರ್ಯದರ್ಶಿ ಗಳು :* 1) ಬಿ. ಜಯರಾಮ ರಾವ್ ಅಲಂಗಾರ್ (ನಿವೃತ್ತ ಮುಖ್ಯ ಅಧ್ಯಾಪಕರು), 2) ರಾಯಿ ರಾಜಕುಮಾರ್ ರಾವ್ (ಅಧ್ಯಾಪಕರು ಜೈನ್ ಹೈಸ್ಕೂಲ್, ಮೂಡಬಿದ್ರಿ), *ಗೌರವ ನಿರ್ದೇಶಕರು :* 1) ಶೈಲೇಶ್ ರಾಮ ರಾವ್, ಮಾಸ್ತಿ ಕಟ್ಟೆ (ನಿವೃತ್ತ ಜಿ.ಎಂ.ಹಿಂದೂಸ್ತಾನ್ ಪೆಟ್ರೋಲಿಯಮ್ ಲಿ.) 2) ಗಣೇಶ್ ರಾವ್. ಬಿ. ವಿಶಾಲ್ ನಗರ. (ಉದ್ಯಮಿ, ಅಧ್ಯಕ್ಷರು, ಶ್ರೀ ಕೃಷ್ಣ ಫ್ರೆಂಡ್ಸ್ ಸರ್ಕಲ್. ಮೂಡಬಿದ್ರಿ), 3) ಅನಂತ ಜನಾರ್ಧನ ರಾವ್ ಯು. ಅಂಬೂರಿ.(ಉದ್ಯಮಿ) 4) ರಾಘವೇಂದ್ರ ರಾವ್ ಶಿರ್ತಾಡಿ. (ನೌಕರರು ಮಹಾವೀರ್ ಕಾಲೇಜ್ ಮೂಡಬಿದ್ರಿ), ನಮ್ಮ *ಪರಿಷತ್ತಿನ ಗೌರವ ಸಲಹೆಗಾರರು :* 1) ಕರುಣ್ ರಾವ್ ಬೆಳ್ಳೆ, ಮಂಗಳೂರು, 2) ಬಿ. ಕೆ. ಧನಂಜಯ ರಾವ್, ಬೆಳ್ತಂಗಡಿ, 3) ಎಂ. ಕೆ. ದಿವಾಕರ್ ರಾವ್, ಪಡುಬಿದ್ರಿ, 4) ಕೇಶವ ರಾವ್, ಕಾರ್ಕಳ, 5) ಶ್ರೀನಿವಾಸ ಶರ್ಮ, ಪಾದೆಬೆಟ್ಟು.

ಶ್ರೀ ಕ್ಷೇತ್ರ ಉದಯಾದ್ರಿ

**ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ**

**ಉದಯಾದ್ರಿ, ಪಡುಬಿದ್ರಿ, ಉಡುಪಿ ಜಿಲ್ಲೆ – 574111**

**ಸ್ವಸ್ತಿ ಶ್ರೀ ಶುಭಕೃತ್ ಸಂವತ್ಸರದ ಕನ್ಯಾ ಮಾಸ ಅಶ್ವೀಜ ಶುದ್ಧ ಅಷ್ಟಮಿಯಂದು ದಿ.03.10.2022ನೇ ಸೋಮವಾರ ದುರ್ಗಾಷ್ಟಮಿಯಂದು ಪೂರ್ವಾಹ್ನದಿಂದ ಶ್ರೀ ಕ್ಷೇತ್ರದಲ್ಲಿ**

**ಶ್ರೀ ಚಂಡಿಕಾಹೋಮ** ಸಂಪನ್ನಗೊಳ್ಳಲಿರುವುದು.

**ಶ್ರೀ ಪ್ರಸನ್ನ ಪಾರ್ವತಿ ದೇವಿಯ ಸನ್ನಿಧಾನದಲ್ಲಿ ನವರಾತ್ರಿ ಮಹೋತ್ಸವದ ಅಂಗವಾಗಿ ಕನ್ಯಾ ಮಾಸ ಅಶ್ವೀಜ ಶುದ್ಧ ಪಾಡ್ಯದಿಂದ ನವಮಿ ಪರ್ಯಂತ ದಿ. 26.09.2022ನೇ ಸೋಮವಾರದಿಂದ ತಾ. 04.10.2022ನೇ ಮಂಗಳವಾರದವರೆಗೆ ಪ್ರತಿ ದಿನ ರಾತ್ರಿ 7.30ಕ್ಕೆ**

**ವಿಶೇಷ ದುರ್ಗಾ ಪೂಜಾ ಕಾರ್ಯಕ್ರಮವು** ಜರಗಲಿರುವುದು.

**ದುರ್ಗಾ ಪೂಜಾ ಬಾಬ್ತು ರೂ. 300 (ಹೂ, ಹಣ್ಣುಕಾಯಿ ತರಬೇಕಾಗಿ ವಿನಂತಿ).**

ಶ್ರೀ ಗುರುದೇವತಾನುಗ್ರಹದಿಂದ ನಡೆಯಲಿರುವ ಈ ದೇವತಾ ಕಾರ್ಯಗಳಲ್ಲಿ ತಾವೆಲ್ಲರೂ ತನು, ಮನ, ಧನದಿಂದ ಸಹಕರಿಸಿ ಆ ದಿನ ಮಧ್ಯಾಹ್ನ ನಡೆಯುವ ಸಾರ್ವಜನಿಕ ಅನ್ನಸಂತರ್ಪಣೆ ಸ್ವೀಕರಿಸಿ ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

**ಜಗದಾಭಿರಾಮಸ್ವಾಮಿ**
ಪ್ರಧಾನ ಅರ್ಚಕರು

**ಪಿ.ಡಿ. ಶೇಖರ್ ರಾವ್**
ಅಧ್ಯಕ್ಷರು

**ಕರುಣಾಕರ್ ಬೆಳ್ಳೆ**
**ಪಿ. ರಘುವೀರ್ ರಾವ್**
ಗೌರವಾಧ್ಯಕ್ಷರು

**ಶ್ರೀನಿವಾಸ್ ಶರ್ಮ ಪಾದೆಬೆಟ್ಟು**
ಖಜಾಂಚಿ

**ನರೇಂದ್ರ ಸ್ವಾಮಿ**
ಕಾರ್ಯದರ್ಶಿ

## ಗುರುವಿನಂತೆ ಅಪ್ಪ......

**– ಶ್ರೀಮತಿ ಮಮತಾ ಹರೀಶ್ ರಾವ್**

ಸ್ವಾಭಿಮಾನದ ಮೂರ್ತಿ, ಅನುಪಮ ಬುದ್ಧಿಶಕ್ತಿ, ಚಾಣಾಕ್ಷತನ, ದೃಢವಾದ ಸ್ಥಿತ ಪ್ರಜ್ಞತೆ, ಹದವಾದ ಮಂದಸ್ಮಿತ, ಹಿತಮಿತ ಮಾತು, ನೇರನುಡಿ ನಡೆ ಇವೆಲ್ಲವೂ ನಮ್ಮ ಪ್ರೀತಿಯ ಅಪ್ಪ ಶ್ರೀ ಯಂ. ಸದಾನಂದ ರಾವ್‌ರವರನ್ನು ಬಣ್ಣಿಸಬಹುದಾದ ಶಬ್ದಗಳು. ಬಾಲ್ಯದಿಂದಲೇ ಜೀವನ ಪಾಠಗಳನ್ನು ತನ್ನ ತಂದೆಯವರಾದ ಮಾರ್ಪಳ್ಳಿ ದೇವರಾಜಯ್ಯನವರಿಂದ ಮತ್ತು ಮಾತೃತ್ವದ ಪ್ರೀತಿಯನ್ನು ತನ್ನ ಮಾತೃಶ್ರೀಯವರಾದ ನಾಗವೇಣಿ ಇವರೊಂದಿಗೆ ಅನುಭವಿಸಿ, ಹಿರಿಯ ಸಹೋದರಿ ಸರಸ್ವತಿ ಮತ್ತು ಹಿರಿಯ ಸಹೋದರ ಶಂಕರ ಇವರ ಒಡನಾಟದಲ್ಲಿ ಬಾಲ್ಯ ಕಳೆದು, ಮನೆಯಲ್ಲಿ ಬಡತನ ಕಿತ್ತು ತಿನ್ನುತ್ತಿದ್ದ ಪರಿಸ್ಥಿತಿಯಲ್ಲಿಯೂ 9ನೇ ತರಗತಿಯನ್ನು ಪೂರ್ಣಗೊಳಿಸಿ ವಿದ್ಯಾಭ್ಯಾಸಕ್ಕೆ ತಿಲಾಂಜಲಿಯನ್ನಿತ್ತರು. ತಂದೆಯವರು ಟೈಲರಿಂಗ್ ವೃತ್ತಿ ಮಾಡಿಕೊಂಡಿದ್ದರೂ ಕುಟುಂಬದ ಆದಾಯ ಸಾಲುತ್ತಿರಲಿಲ್ಲ. ಅದಕ್ಕಾಗಿ ಅತ್ಯಂತ ಎಳೆ ವಯಸ್ಸಿನಲ್ಲಿಯೇ "ಕೈ ಮಗ್ಗ" ನೇಯ್ಗೆಗೆ ಸೇರಿಕೊಂಡರು. ತಾನು ಓದಿರುವ ವಿದ್ಯೆಗೆ ಸಮನಾದ ಉದ್ಯೋಗವನ್ನು ಪಡೆಯಬೇಕೆಂಬ ಹಂಬಲ ಇದ್ದರೂ ಉದರ ನಿಮಿತ್ತಕ್ಕಾಗಿ ಬಸ್ ಕಂಡಕ್ಟರ್ ಆಗಿ ದುಡಿದರು. ನಂತರ ರಿಕ್ಷಾ ಚಾಲನೆ ಮಾಡುತ್ತಾ ಎಸ್.ಎಸ್.ಎಲ್.ಸಿ ವಿದ್ಯಾಭ್ಯಾಸವನ್ನು ಟ್ಯುಟೋರಿಯಲ್‌ನಲ್ಲಿ ಕಲಿತು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾದರು. ನಂತರ ತನ್ನ ಅಣ್ಣ ಶಂಕರ ರಾವ್ ಮೂಲಕ ಉಡುಪಿಯ ರಥಬೀದಿಯಲ್ಲಿ ಇದ್ದ ವೆಂಕಟ್‌ರಾಯ ಪೈ ಆ್ಯಂಡ್ ಸನ್ಸ್ ಅವರ ದಿನಸಿ ಅಂಗಡಿಯಲ್ಲಿ ಗುಮಾಸ್ತ ಕೆಲಸ ಸಿಕ್ಕಿತು. ಬದುಕಿಗೊಂದು ದಾರಿ ಆಯಿತು ಎಂಬ ಸಂತೋಷದೊಂದಿಗೆ ಈ ವೃತ್ತಿಯಲ್ಲಿ ತನ್ನನ್ನು ಸಂಪೂರ್ಣ ತೊಡಗಿಸಿಕೊಂಡರು. ದಿನದಲ್ಲಿ 12 ಗಂಟೆಗಳ ದುಡಿಮೆಯೊಂದಿಗೆ ಸರಳ ಜೀವನ ಯಾವುದೇ ಮಹಾತ್ವಾಕಾಂಕ್ಷೆ ಇಲ್ಲದೆ ಮಡದಿ ಶಾರದಾ ಹಾಗೊ 5 ಮಕ್ಕಳು ಮತ್ತು ಹಿರಿಯ ಸಹೋದರನ ಕುಟುಂಬದೊಂದಿಗೆ ಜೀವನ ಸಾಗಿತು. ಕಾಯಕ ಯೋಗಿಯಂತೆ ದುಡಿಮೆ, ರಜೆ ಮಾಡುವುದೆಂದರೆ ಬಹಳ ಅಪರೂಪ, ತನ್ನ ಆಪ್ತ ಸ್ನೇಹಿತರೊಡನೆ ಬಹಳ ಅಪರೂಪವೆಂಬಂತೆ ಸಿನೆಮಾ ನೋಡಿದರೆ ಅದೇ ಮೋಜು. ಬಡತನದ ಪರಿಸ್ಥಿತಿ ಇದ್ದರೂ ಹಾಸಿಗೆ ಇದ್ದಷ್ಟೇ ಕಾಲು ಚಾಚು ಎಂಬಂತೆ ಸೂಕ್ಷ್ಮವಾಗಿ ಸಂಸಾರದ ಖರ್ಚು ವೆಚ್ಚಗಳನ್ನು ನೀಗಿಸಿಕೊಂಡು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಪ್ರಥಮ ಆದ್ಯತೆ ನೀಡಿದರು. ತನ್ನ ಕರ್ತವ್ಯದಲ್ಲೂ ನಿಷ್ಠೆ, ಪ್ರಾಮಾಣಿಕತೆ, ಬದ್ಧತೆಯಿಂದ ಒಬ್ಬ ಬಿ.ಕಾಂ. ಪದವೀಧರನಿಗಿಂತ ಕಡಿಮೆ ಇಲ್ಲದೆ ದುಡಿದರು. ಅಂಗಡಿ ಮುಖ್ಯಸ್ಥರಿಂದ ವಿಶೇಷ ಹೆಗ್ಗಳಿಕೆಗೆ ಪಾತ್ರರಾದರು. ಈ ಮಧ್ಯೆ ತನ್ನ ಚಿಕ್ಕಪ್ಪ ಬಾಬು ರಾಯರು ಅಪಘಾತಕ್ಕೊಳಗಾಗಿ ಅಸೌಖ್ಯಗೊಂಡು ನಿಧನರಾದ ಬಳಿಕ ಅವರ ಪತ್ನಿ (ಚಿಕ್ಕಮ್ಮ) ರತ್ನಾ ಬಾಯಿಯವರು ತನಗೆ ಮಕ್ಕಳಿಲ್ಲದ ಕಾರಣ ಅವರನ್ನು ಚಿಟ್ಪಾಡಿಯಲ್ಲಿರುವ ತನ್ನ ಮನೆಗೆ ಕರೆಸಿಕೊಂಡರು. ಕುಕ್ಕಿಕಟ್ಟೆಯಲ್ಲಿದ್ದ ಮನೆಯನ್ನು ತನ್ನ ಅಣ್ಣ ಶಂಕರ ರಾಯರಿಗೆ ಸಂಪೂರ್ಣವಾಗಿ ಬಿಟ್ಟುಕೊಟ್ಟರು. ಅಂಗಡಿಯಲ್ಲಿ ದುಡಿಮೆ ಮಾಡುತ್ತಿದ್ದಂತೆ ರಿಕ್ಷಾ, ವ್ಯಾನ್, ಲಾರಿಗಳ ಮಾಲಕರಾಗಿ ಒಬ್ಬ ಉದ್ಯಮಿಯ ಗುಣಗಳನ್ನು ಮೈಗೂಡಿಸಿಕೊಂಡರು. ಆದರೆ ಈ ನಡುವೆ ಅವರ ವೃತ್ತಿಯಲ್ಲಿ ಅವರ ಸ್ವಾಭಿಮಾನಕ್ಕೆ ಧಕ್ಕೆಯಾದಂತಹ ಸನ್ನಿವೇಶದಲ್ಲಿ ತನ್ನ ವೃತ್ತಿಯನ್ನು ತ್ಯಜಿಸುವಂತಹ ನಿರ್ಧಾರವನ್ನು ಕೈಗೊಂಡರು. "ಕಷ್ಟ ಪಟ್ಟು ಎಲ್ಲಿ ದುಡಿದರೂ ಜೀವನ ನಡೆಸಬಹುದು" ಎಂಬ ಆತ್ಮವಿಶ್ವಾಸದಿಂದ ವೃತ್ತಿಯಿಂದ ಬಿಡುಗಡೆ ಹೊಂದಿ ಸ್ವಂತ ಸಗಟು (ಹೋಲ್ ಸೇಲ್) ದಿನಸಿ ವ್ಯಾಪಾರ "ಶ್ರೀ ಕೃಷ್ಣ ಟ್ರೇಡಿಂಗ್ ಏಜೆನ್ಸೀಸ್" ಮತ್ತು ಚಿಲ್ಲರೆ (ರಿಟೈಲ್) ಅಂಗಡಿ "ರಾಧಾ ಮಾಧವ ಸ್ಟೋರ್ಸ್" ತಾನು ವಾಸವಿದ್ದ ಮನೆಯಲ್ಲಿ ಆರಂಭಿಸಿದರು. ತನ್ನ ಇಬ್ಬರು ಗಂಡು ಮಕ್ಕಳ ಸಹಕಾರದಿಂದ ಮತ್ತು ತನ್ನ ಪರಿವಾರದವರ, ಹಿತೈಶಿಗಳ ಹಾಗೂ ಅಪಾರ ಪ್ರಮಾಣದ ವ್ಯಾಪಾರದ ಸಂಪರ್ಕದಿಂದ ಹುಬ್ಬಳ್ಳಿ, ಮಂಗಳೂರು ಊರುಗಳ ಅನೇಕ ವ್ಯಾಪಾರಸ್ಥರ ಹಾಗೂ ಒಡನಾಡಿಗಳ ಸಹಕಾರದಿಂದ ವ್ಯಾಪಾರ ಕೈಗೆತ್ತಿಕೊಂಡರು. ಹಿಂದೆ ಕರ್ತವ್ಯದಲ್ಲಿ ತೋರಿದ ನಿಷ್ಠೆ, ಪ್ರಾಮಾಣಿಕತೆ, ಬದ್ಧತೆಯ ಕಾರಣದಿಂದಾಗಿ ಬ್ಯಾಂಕ್‌ನಿಂದ ಸಾಲ ಸೌಲಭ್ಯ ದೊರಕಿತು. ಮುಂದೆ ವ್ಯಾಪಾರ ಕೈ ಹಿಡಿಯಿತು. ಇದರೊಂದಿಗೆ ಲಾರಿ ಸರ್ವಿಸ್, ಟೆಲಿಫೋನ್ ಬೂತ್‌ನಂತಹ ಸೇವೆಯನ್ನು ಆರಂಭಿಸಿ ಮಕ್ಕಳನ್ನು ಕೆಲಸಗಳಲ್ಲಿ ತೊಡಗಿಸಿಕೊಂಡರು. ಇಬ್ಬರೂ ಗಂಡು ಮಕ್ಕಳು ಹಗಲು ವ್ಯಾಪಾರದಲ್ಲಿ ತೊಡಗಿ ಸಂಜೆ ಕಾಲೇಜಿಗೆ ತೆರಳಿ ಓದಿದರು. ಈ ಮೂಲಕ ಮಕ್ಕಳಲ್ಲಿ ಜೀವನ ಕೌಶಲ್ಯ ಮೂಡಿಸಿ ಆತ್ಮವಿಶ್ವಾಸ ಹೆಚ್ಚಿಸಿದರು. ಅವರು ಸಾಮಾಜಿಕ ಚಟುವಟಿಕೆಗಳಲ್ಲಿ ಅಂದರೆ ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘದಲ್ಲಿ ಕೋಶಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು. ಪ್ರಸುತ್ತ ಶ್ರೀ ಶಾರದಾ ಸೊಸೈಟಿಯಲ್ಲಿ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.

ಕೆಲವೊಂದು ಬಾರಿ ವಜ್ರದಂತೆ ಕಠೋರವೂ ಇನ್ನು ಕೆಲವೊಮ್ಮೆ ಹೂವಿನಂತೆ ಮೃದುವಾಗಿ ಜೀವನವನ್ನು ಸಾಗಿಸಿದವರು. ಪತ್ನಿ ತನ್ನ 63 ನೇ ವಯಸ್ಸಿನಲ್ಲಿ ತೀವ್ರತರವಾದ ಅನಾರೋಗ್ಯದಿಂದ ದೈವಾಧೀನರಾದಂತಹ ಸಂದರ್ಭ ಉತ್ತಮ ಆರೋಗ್ಯ ಅತೀ ಅವಶ್ಯ ಎಂದು ಮನಗಂಡು ಮತ್ತು ಪತ್ನಿ ವಿಯೋಗದ ದುಃಖ ಮರೆಯಲು ತನ್ನ 68ನೇ ವಯಸ್ಸಿನಲ್ಲಿ ಯೋಗಾಭ್ಯಾಸವನ್ನು ತನ್ನ ನಿತ್ಯ ಕರ್ಮವನ್ನಾಗಿಸಿಕೊಂಡರು. ಯೋಗ ಗುರು ಬಾಬಾ ರಾಮ್‌ದೇವ್ ಅವರ ಭಾರತ್ ಸ್ವಾಭಿಮಾನ್ ಮತ್ತು ಪತಂಜಲಿ ಯೋಗ ಪೀಠದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡರು. ಹರಿದ್ವಾರಕ್ಕೆ ತೆರಳಿ ತರಬೇತಿ ಪಡೆದು ಯೋಗ ಶಿಕ್ಷಕರಾಗಿ ಯೋಗ ಗುರುಗಳಾಗಿ ಇಂದು ಅನೇಕ ಶಿಷ್ಯರನ್ನು ಹೊಂದಿದ್ದಾರೆ. ಪತಂಜಲಿ ಆರೋಗ್ಯ ಕೇಂದ್ರವನ್ನು ಕೂಡಾ ನಡೆಸುತ್ತಿದ್ದಾರೆ.

ಜೀವನದ ಆಗು ಹೋಗುಗಳ ಕುರಿತು ಚಿಂತಿಸದೆ ಬದುಕಿನ ದಾರಿಯಲ್ಲಿ ಬಂದ ಸನ್ನಿವೇಶಗಳನ್ನು ಪರಿಸ್ಥಿತಿಗಳನ್ನು ನಿರ್ಲಿಪ್ತತೆಯಿಂದ ಅನುಭವಿಸಿ, ಇದು ಸಹಜ ಎಂಬಂತೆ ಸ್ವೀಕರಿಸಿ, ಭಾವನೆಗಳಿದ್ದರೂ ಅದನ್ನು ವ್ಯಕ್ತಪಡಿಸದೇ ಇರುವ ನಮ್ಮ "ಅಪ್ಪ" ನಮಗೆ ಗುರುಗಳು. ಅವರು ಮಾಡಿದ ಸಾಧನೆ ಬಹುಶಃ ಇಂದಿನ ವಿದ್ಯಾವಂತ ವೃತ್ತಿಪರರಿಗೆ ಆದರ್ಶ. ಮೆಟ್ರಿಕ್ ಮಾತ್ರ ಓದಿದ್ದರೂ ಅವರಿಗೆ ಇರುವ ಕನ್ನಡ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ಬರವಣಿಗೆ ಮೇಲೆ ಇರುವ ಹಿಡಿತ ಈಗಿನ ವಿದ್ಯಾವಂತರಲ್ಲಿ ಇರುವುದು ವಿರಳ. ಏನೇ ಸಾಧನೆ ಮಾಡಿದರೂ, ಸಂತೋಷವಾದರೂ ವ್ಯಕ್ತಪಡಿಸದೇ ಮನದಲ್ಲೇ ಅದನ್ನು ಅನುಭವಿಸಿ ಕೃತಾರ್ಥರಾಗುತ್ತಿದ್ದ ದೊಡ್ಡ ಗುಣ ಅವರದ್ದು. ತನ್ನ ಹಿರಿಯ ಸಹೋದರಿ ಹಾಗೂ ಸಹೋದರರ ಮೇಲೆ ಇದ್ದ ಅಪಾರ ಪ್ರೀತಿ ನಮಗೆ ಅನುಕರಣೀಯ. ನಮಗೆಲ್ಲಾ ಗಂಭೀರತೆ, ಜೀವನ ಶಿಕ್ಷಣ, ಸ್ವಾಭಿಮಾನದ ಪಾಠ ಹೇಳಿಕೊಟ್ಟಂತಹ ಗುರುಗಳು ನಮ್ಮ ಮೆಚ್ಚಿನ ಅಪ್ಪ. ಅವರ 82 ನೇ ವಯಸ್ಸಿನಲ್ಲಿ ಮತ್ತೊಮ್ಮೆ ಜೀವನದ ಹುರುಪನ್ನು ತುಂಬಿಸಿ ಚೈತನ್ಯವನ್ನು ಮೂಡಿಸುವ ನಮ್ಮ ಪ್ರಯತ್ನ ಸಹಸ್ರ ಚಂದ್ರ ದರ್ಶನ ಕಾರ್ಯಕ್ರಮ. "ಅಪ್ಪಾ ನೀವು ಎಂದಿಗೂ ಸುಖವಾಗಿರಿ, ಆನಂದದಿಂದ ಇರಿ ಎಂಬ ಆಸೆ ನಮ್ಮದು. ಒಬ್ಬ ಮಹಾಗುರುವಿನಂತೆ ಎಂದೆಂದಿಗೂ ಮಾರ್ಗದರ್ಶನ ಮಾಡುತ್ತಾ ಇರಿ ಎಂದು ತಮ್ಮ ಆಶೀರ್ವಾದವನ್ನು ಬೇಡುತ್ತಿದ್ದೇವೆ".

# ಆಸೆ ಎಂಬ ಬಿಸಿಲುಗುದುರೆ

–ರಶ್ಮಿ ರಾವ್, ಬೆಂಗಳೂರು

'ಬಾನಿಗೊಂದು ಎಲ್ಲೆ ಎಲ್ಲಿದೇ ನಿನ್ನಾಸೆಗೆಲ್ಲಿ ಕೊನೆ ಇದೆ ಏಕೆ ಕನಸು ಕಾಣುವೆ ನಿಧಾನಿಸು ನಿಧಾನಿಸು' ಅನ್ನುವ ಸಿನಿಮಾ ಗೀತೆಯಂತೆ ಮನುಷ್ಯನ ಆಸೆಗೆ ಕೊನೆ ಇಲ್ಲ. ಬಾನಿನ ಕೊನೆಯನ್ನು ಮುಟ್ಟಬಹುದೆನೋ, ಸಾಗರದ ಕೊನೆಯನ್ನಾದರೂ ಮುಟ್ಟಬಹುದು. ಆದರೆ ಮನುಷ್ಯನ ಆಸೆಗೆ ಕೊನೆ ಇನ್ನೂ ಸಿಕ್ಕಿಲ್ಲ. ಕಂಡದ್ದೆಲ್ಲ ಬೇಕು ಅನ್ನುವ ಆಸೆಗೆ ಕೊನೆ ಮೊದಲಿಲ್ಲ.

ಹಾಗಾದರೆ ಆಸೆ ಇರಬೇಡವೇ ಅದು ನಿಜವಾಗಿಯೂ ಬಿಸಿಲ್ಗುದುರೆ ಹೌದೇ? ಕಂಡರೂ ಕಾಣದಂತೆ, ಮುಟ್ಟಲು ಹೋದರೆ ಮಾಯವಾಗುವಂತಹುದು ನಿಜವೇ? ಹೌದು. ಒಬ್ಬ ಮನುಷ್ಯನಿಗೆ ವೈಯುಕ್ತಿಕವಾಗಿ ಹೌದು. 'ಹಾಸಿಗೆ ಇದ್ದಷ್ಟು ಕಾಲು ಚಾಚು' ಅಂತ ಗಾದೆಯೇ ಇದೆ. ಎಲ್ಲ ಜನರ ಜೀವನಮಟ್ಟ ಒಂದೆ ರೀತಿ ಇರಲು ಸಾಧ್ಯ ಇಲ್ಲ. ಸಂಪಾದನೆ, ಆರ್ಥಿಕ ಸ್ಥಿತಿ ಕೂಡ ಬದಲಾಗುತದೆ. ನಮಗೆ ಮಿತಿ ಅದೇ. ಕೈಯಳತೆಯಲ್ಲಿ ಇರುವಷ್ಟೇ ಬಯಕೆ ಇರಬೇಕು. ಎಂತಹಾ ಶ್ರೀಮಂತನಿಗೂ ಪಡೆಯಲು ಸಾಧ್ಯವಾಗದ ವಸ್ತುಗಳು ಜಗತ್ತಿನಲ್ಲಿ ಇದ್ದೇ ಇವೆ.

ಲೌಕಿಕ ಬದುಕಿಗೆ ಬಂದ ಮೇಲೆ ಸಹಜವಾಗಿ ಕೆಲವು ಆಸೆಗಳು ಇರುತ್ತವೆ. ಇರಲೂ ಬೇಕು. ವಸ್ತುಗಳ ಮೇಲೆ ಅತಿಯಾಸೆ ಪಡುವುದಕ್ಕಿಂತ ಪ್ರೀತಿ ವಿಶ್ವಾಸಕ್ಕೆ ಆಸೆಪಡುವುದು ಒಳ್ಳೆಯದು. ಅವನ್ನು ನಾವೇ ಮೊದಲು ಕೊಟ್ಟು ತೆಗೆದುಕೊಳ್ಳುವುದೂ ಒಳ್ಳೆಯದು.

'ಅತಿಯಾಸೆ ಗತಿಗೇಡು' 'ಆಸೆಯೇ ದುಃಖಕ್ಕೆ ಮೂಲ' ಅಂತ ಹೇಳುತ್ತಾರೆ. ಆಸೆ ಇರಬೇಕು ಆದರೆ ಮಿತಿ ಮೀರಿದ ಆಸೆ ಕೆಡುಕನ್ನು ತರಬಲ್ಲುದು. ಎಷ್ಟೋ ಬಾರಿ ಬಾಲ್ಯದಲ್ಲಿದ್ದ ಬಡತನದ ಕಾರಣದಿಂದ ಅದುಮಿ ಇಟ್ಟ ಆಸೆಗಳು ಮುಂದೆ ದೊಡ್ಡವರಾದ ಮೇಲೆ ಪ್ರಕಟಗೊಂಡು ಕೆಲವರು ದುಂದುವೆಚ್ಚಗಾರರು ಆಗುವುದೂ ಉಂಟು. ಮತ್ತೆ ಕೆಲವರು 'ಬಾಲ್ಯದಲ್ಲಿ ಬೇಕು ಅಂದಾಗ ಸಿಗಲ್ಲಿಲ್ಲ ಈಗ ಆಸೆ ಇಲ್ಲ' ಅನ್ನುವವರು. ಇದು 'ಹಲ್ಲಿದ್ದಾಗ ಕಡಲೆ ಇಲ್ಲ ಕಡಲೆ ಇದ್ದಾಗ ಹಲ್ಲಿಲ್ಲ' ಅಂತಾರಲ್ಲ ಆ ತರಹ. ಇನ್ನು ಕೆಲವರದು ತೃಪ್ತಿಕರವಾದ ಬಾಲ್ಯ ಜೀವನ. ಅಂತಹವರು ಹೆಚ್ಚಾಗಿ ಆಸೆ ಪಡುವುದು ಕಮ್ಮಿ. ಇರುವುದರಲ್ಲಿ ತೃಪ್ತರಾಗಿ ಇರುತಾರೆ. ಅಪವಾದಗಳು ಅಲ್ಲೂ ಇರಬಹುದು. ಮನುಷ್ಯನ ಪ್ರತಿ ವರ್ತನೆಗಳ ಬೇರು ಆತನ/ಆಕೆಯ ಬಾಲ್ಯದಲ್ಲಿರುತದೆ ಅನ್ನುತ್ತಾರೆ. ಬಾಲ್ಯದಲ್ಲಿ ಅತೃಪ್ತಿ ಕಾಡಿದರೆ ಅದು ಸುಪ್ತವಾಗಿದ್ದು ಮುಂದೆ ಕಾಣಿಸಿಕೊಳ್ಳುತ್ತದೆ. ಅದು ಭೌತಿಕ ವಸ್ತುಗಳ ಮೇಲಿನ ಆಸೆ, ದುಡ್ಡು, ಮನೆ, ಕಾರು, ಸೀರೆಗಳು, ದುಬಾರಿ ವಾಚು, ಸುಗಂಧ ದ್ರವ್ಯ, ಶೂಗಳು, ಬಟ್ಟೆಗಳು ಇತ್ಯಾದಿಗಳ ಮೇಲಿನ ಆಸೆ ಮೋಹ ಆಗಿರಬಹುದು. ಅದು ಬೇಕು ಇದು ಬೇಕು ಅನ್ನುವ ಕೊಳ್ಳುಬಾಕತನವೂ ಆಗಿರಬಹುದು. ಅಗತ್ಯ ಇದೆಯೋ ಇಲ್ಲವೊ ಇತರರನ್ನು ಮೆಚ್ಚಿಸಲೋ ಅಥವಾ ಬೇರೆಯವರ ಬಳಿ ಇದೆ ತನಗೂ ಬೇಕು ಅಂತಲೋ ಅನಗತ್ಯ ವಸ್ತುಗಳನ್ನು ಕೊಂಡು ರಾಶಿ ಹಾಕುವುದು. ಈಗಂತೂ ಮನೆಯಲ್ಲೇ ಕುಳಿತು ಮೊಬೈಲ್ನಿಂದ ಏನು ಬೇಕಾದರೂ ಖರೀದಿಸಬಹುದು.

ಇಲ್ಲೊಂದು ಉದಾಹರಣೆ: ಹಿಂದಿನ ಕಾಲದಲ್ಲಿ ಮಕ್ಕಳು ಕೇಳಿದ್ದೆಲ್ಲಾ ಹೆತ್ತವರು ಕೊಡಿಸುವುದು ಕಮ್ಮಿ. ಆದರೆ ಈಗ ಹಾಗಲ್ಲ. ಮಕ್ಕಳು ಕೇಳಿದರೆ ಆ ವಸ್ತುವಿಗೆ ಲಕ್ಷದ ಮೇಲೆ ದರವಿರಲಿ, ಅದು ನಿಜವಾಗಿಯೂ ಮಗನಿಗೆ/ ಮಗಳಿಗೆ ಅಗತ್ಯವಾದುದೇ ಎಂಬುದನ್ನೂ ವಿವೇಚಿಸದೇ ತಾಯಿ ತಂದೆ ತೆಗೆದುಕೊಡುತಾರೆ ಮಗುವಿನ ಬಾಯಲ್ಲಿ ಬಂದರೆ ಆಯಿತು ಅದೇ ವೇದ ವಾಕ್ಯ. ನಾವು ನಮ್ಮ ಬಾಲ್ಯದಲ್ಲಿ ಪಟ್ಟ ಕಷ್ಟ ಸಾಕು ಆಸೆ ಪಟ್ಟರೂ ಸಿಗದೆ ನಿರಾಸೆ ಅನುಭವಿಸಿದ್ದು ಸಾಕು ನಮ್ಮ ಮಕ್ಕಳಿಗೆ ಹಾಗಾಗುವುದು ಬೇಡ ಅನ್ನುವುದೊಂದೆ ಉದ್ದೇಶ. ಇದು ಎಷ್ಟು ಸರಿ? ಆದರೆ ಇನ್ನೊಂದು ರೀತಿಯಲ್ಲಿ ನೋಡುವುದಾದರೆ ಆಸೆ, ಮಹತ್ವಾಕಾಂಕ್ಷೆ ಇಲ್ಲದೇ ಹೋಗಿದ್ದರೆ ಮನುಷ್ಯನಿಗೆ ಇಷ್ಟೊಂದು ತಂತ್ರಜ್ಞಾನದ ಅವಿಷ್ಕಾರ ಸಾಧ್ಯವಿರುತ್ತಿಲ್ಲಿಲ್ಲ ಅನ್ನಿಸುತ್ತದೆ. ಇಂದು ಮಾನವ ಚಂದ್ರನನ್ನು ಮುಟ್ಟಿ ಬಂದಿದ್ದಾನೆ. ಮಂಗಳ ಗ್ರಹಕ್ಕೆ ಹೋಗುವುದರಲ್ಲಿ ಇದ್ದಾನೆ. ಅಂತರಿಕ್ಷವನ್ನು ಮುಟ್ಟಿ ಅಲ್ಲಿಯೇ ಇದ್ದು ಸಂಶೋಧನೆ ಕೈಗೊಳ್ಳುವ ವ್ಯವಸ್ಥೆ ಮಾಡಿಕೊಂಡಿದ್ದಾನೆ. ತಂತ್ರಜ್ಞಾನದಿಂದ ಜಗತ್ತೆ ಹತ್ತಿರವಾಗುವಂತೆ ಮಾಡಿದ್ದಾನೆ. ಇದು ಬರಿಯ ಆಸೆಯಿಂದ ಅಷ್ಟೇ ಅಲ್ಲ. ಇಚ್ಛಾ ಶಕ್ತಿ, ಸತತ ಪ್ರಯತ್ನ, ಪರಿಶ್ರಮ ಮತ್ತು ಮಹತ್ವಾಕಾಂಕ್ಷೆಯಿಂದ ಸಾಧ್ಯವಾಗಿದೆ. ಮನುಷ್ಯ ಆಕಾಶ, ತಾರೆ, ಚಂದ್ರರನ್ನು ಕಂಡು ಸುಮ್ಮನೆ ಕುಳಿತಿದ್ದರೆ, ಹಾರಾಡುವ ಹಕ್ಕಿ ನೋಡಿ ಖುಷಿ ಪಡುತ್ತ ಕುಳಿತ್ತಿದ್ದರೆ ಅವನ್ನು ಮುಟ್ಟಲು ಆಗಲಿ, ವಿಮಾನ ತಯಾರಿಸಲು ಆಗಲೀ ಸಾಧ್ಯವಾಗುತ್ತಿರಲಿಲ್ಲ. ಮಾನವ ಸಮಷ್ಟಿ ದೃಷ್ಟಿಯಿಂದ ನೋಡಿದಾಗ ಆಸೆ ಸಾಧನೆ ಅಗತ್ಯ. ಮನುಕುಲದ ಏಳಿಗೆಗಾಗಿ ಮಾನವ ಕೈಗೊಳ್ಳುವ ಕೆಲಸಗಳು ಆಸೆಗಿಂತ ಮಿಗಿಲಾದರೂ ಅದರಿಂದ ಒಳಿತಿದೆ. ಜಗತ್ತಿನಲ್ಲೇ ಅತೀ ದೊಡ್ಡ ಶ್ರೀಮಂತನಾದರೂ 'ನನ್ನಲ್ಲಿ ತೃಪ್ತಿ ಇದೆ ನನ್ನ ಬಳಿ ಎಲ್ಲವೂ ಇದೆ ಯಾವುದೇ ಆಸೆ ಇಲ್ಲ' ಅನ್ನುವವರು ವಿರಳ. ಎಲ್ಲಕ್ಕಿಂತ ಮುಖ್ಯ ನೆಮ್ಮದಿ, ಮಾನಸಿಕ ಶಾಂತಿ, ಉತ್ತಮ ಆರೋಗ್ಯ ಮತ್ತು ಸಮಾಧಾನ. ಅದು ನಾವು ಖರೀದಿಸುವ ವಸ್ತುಗಳಿಂದ ಸಿಗುವುದಿಲ್ಲ.

ಲೌಕಿಕರಿಗೆ ಭೌತಿಕ ಜಗತ್ತಿನ ವಸುಗಳ ಮೇಲೆ ಆಸೆಯಾದರೆ ಆಧ್ಯಾತ್ಮ ಚಿಂತಕರಿಗೆ ಪಾರಮಾರ್ಥಿಕ ಆಸೆ. ಮುಕ್ತಿಯ, ಮೋಕ್ಷದ, ಭಗವಂತನ ಕೃಪಾ ಕಟಾಕ್ಷದ ಆಸೆ. ಇದು ಅಂತರಂಗ, ಅದು ಬಹಿರಂಗ. ಒಟ್ಟಿನಲ್ಲಿ ಮನುಷ್ಯನಾಗಿ ಭೂಮಿಯ ಮೇಲೆ ಹುಟ್ಟಿದ ಮೇಲೆ 'ಬಿಟ್ಟರೂ ಬಿಡದು ಈ ಮಾಯೆ' ಎನ್ನುವ ರೀತಿ ನಮ್ಮನ್ನು ಆಸೆ ಬಿಡುವುದಿಲ್ಲ. ನಾವೂ ಆಸೆಯನ್ನು ಬಿಡುವುದಿಲ್ಲ. ಆದರೆ ನಮ್ಮ ವಿವೇಚನೆಯನ್ನು ಬಳಸುವುದು ಅಗತ್ಯ.

## ವಿಳಾಸ ಬದಲಾವಣೆ

**ಕಿಶೋರ್ ಕುಮಾರ್ ಬಿ.ರಾವ್**
305 ಕಲ್ಕೂರ ಬ್ರಾಹ್ಮೀ, ಎದುರು: ಸರ್ಕಾರಿ ಮಹಿಳಾ ಹಾಸ್ಟೆಲ್
ಬನ್ನಂಜೆ ಬ್ರಹ್ಮಗಿರಿ ರಸ್ತೆ, ಉಡುಪಿ ಕರ್ನಾಟಕ – 576101

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 4-00ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8–00, ಮಧ್ಯಾಹ್ನ 12–00 ಹಾಗೂ ರಾತ್ರಿ 7–30ಕ್ಕೆ
ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ
ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ }
ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4–30ರಿಂದ

**ತಾ.13-10-2022 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.100/-)**

**ತಾ.02-10-2022 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.30-09-2022 ಮತ್ತು ತಾ.14-10-2022 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಕನ್ಯಾ ಮಾಸದ ವಿಶೇಷ ದಿನಗಳು

| | | | |
|---|---|---|---|
| 17.09.2022 | ಕನ್ಯಾ ಸಂಕ್ರಮಣ | 04.10.2022 | ಮಹಾನವಮಿ, ಆಯುಧ ಪೂಜಾ |
| 21.09.2022 | ಸರ್ವೈಕಾದಶಿ | 05.10.2022 | ವಿಜಯದಶಮಿ, ಶಾರದಾ ವಿಸರ್ಜನಂ |
| 25.09.2022 | ಮಹಾಲಯ ಅಮಾವಾಸ್ಯೆ ಸರ್ವಪಿತೃ ದರ್ಶ: | 06.10.2022 | ಸರ್ವೈಕಾದಶಿ |
| 26.09.2022 | ಶರದೃತು ಆಶ್ವಯುಜ ಮಾಸದ ಶುಕ್ಲ ಪಕ್ಷಾರಂಭ, ಶರನ್ನವರಾತ್ರಿ ಆರಂಭ | 09.10.2022 | ಹುಣ್ಣಿಮೆ |
| | | 10.10.2022 | ಶರದೃತು ಆಶ್ವಯುಜ ಮಾಸದ ಕೃಷ್ಣ ಪಕ್ಷಾರಂಭ |
| 30.09.2022 | ಲಲಿತಾ ಪಂಚಮಿ | 13.10.2022 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 8.51 |
| 02.10.2022 | ಶಾರದಾ ಪೂಜಾರಂಭ | | |
| 03.10.2022 | ದುರ್ಗಾಷ್ಟಮಿ | 17.10.2022 | ತುಲಾ ಸಂಕ್ರಮಣ |

## ನಿಧನ



### ನಾಟಿ ವೈದ್ಯೆ ನಾಗಮ್ಮ

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಕಳಸ ಹಂದಿಗೊಡು ದಿ। ಪುಟ್ಟದೇವರಯ್ಯನವರ ಧರ್ಮಪತ್ನಿ ಶ್ರೀಮತಿ ನಾಗಮ್ಮನವರು ತಾ.30.08.2022ರಂದು ತಮ್ಮ 93ನೇ ವಯಸ್ಸಿನಲ್ಲಿ ದೈವಾಧೀನರಾಗಿರುತ್ತಾರೆ. ಅವರು ಓರ್ವ ಪುತ್ರ, ಶ್ರೀಮತಿ ಸಾವಿತ್ರಿ ಮನೋಹರ್ ಸಹಿತ ಏಳು ಮಂದಿ ಪುತ್ರಿಯರು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ. ಶ್ರೀಮತಿಯವರು ಕೊಡುಗೈ ದಾನಿಗಳು ನಾಟಿ ವೈದ್ಯರು, ರಂಗೋಲಿ ಕಲೆ, ಸಂಪ್ರದಾಯದ ಹಾಡುಗಾರರಾಗಿದ್ದು ಊರವರ ಗೌರವ ಹಾಗು ಅಪಾರ ಜನಪ್ರಿಯತೆಯನ್ನು ಗಳಿಸಿದ್ದರು. ನಾಟಿ ವೈದ್ಯ ಪ್ರಶಸ್ತಿ ಪುರಸ್ಕೃತರಾಗಿದ್ದರು.

★★★★ ★★★★



### ಶ್ರೀ ಬಾಲಕೃಷ್ಣ ಪಿ.

ಶ್ರೀ ಬಾಲಕೃಷ್ಣ ಪಡಮಣ್ಣೂರು (ಕೊಡವೂರು) ಇವರು ತಮ್ಮ 82ನೇ ವಯಸ್ಸಿನಲ್ಲಿ ತಾ. 30.08.2022 ರಂದು ಬೆಂಗಳೂರಿನಲ್ಲಿ ನಿಧನರಾದರು. ಶ್ರೀಶಾರದಾ ಪತ್ರಿಕೆಯ ಮಹಾಪೋಷಕರಾಗಿದ್ದ ಇವರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

★★★★ ★★★★



### ವೈ. ಶಕುಂತಳಾ ರಾವ್

ದಿ.ಎರ್ಮಾಳು ಸೀತಾರಾಮರಾಯರ ಪುತ್ರಿ ವೈ. ಶಕುಂತಳಾ ರಾವ್ ಇವರು ತಾ.27–08–2022ರಂದು ಉಡುಪಿ ಕನ್ನರ್ಪಾಡಿಯ ಮನೆಯಲ್ಲಿ ನಿಧನರಾದರು. ಇವರು ಕನ್ನರ್ಪಾಡಿಯಲ್ಲಿ ಬಾಲವಾಡಿ ನಡೆಸುತ್ತಿದ್ದರು. ಇವರು ಓರ್ವ ಸಹೋದರ, ಇಬ್ಬರು ಸಹೋದರಿಯರನ್ನು ಅಗಲಿರುತ್ತಾರೆ.

## ಶುಭ ವಿವಾಹ

ತಾ.01.09.2022ನೇ ಗುರುವಾರ ಉಡುಪಿಯ ಶ್ರೀಮತಿ ಪ್ರಸನ್ನಾ ಹಾಗೂ ಶ್ರೀ ವೆಂಕಟ್ರಾಯ ರಾವ್ ಇವರ ಪುತ್ರಿ **ಚಿ। ಸೌ। ಅಪರ್ಣಾ** ಮತ್ತು ಶ್ರೀಮತಿ ಮೀನಾಕ್ಷಿ ಹಾಗೂ ಶ್ರೀ ಚಂದ್ರಶೇಖರ ಹೆಬ್ಬಾರ್ ಇವರ ಸುಪುತ್ರ **ಚಿ। ಲಕ್ಷ್ಮೀಶ ಕೆ.** ಸಿ. ಇವರ ವಿವಾಹವು ಉಡುಪಿ ಚಿಟ್ಪಾಡಿ ಸರಸ್ವತಿ ಸಭಾಸದನದಲ್ಲಿ ಜರಗಿತು.

★★★★ ★★★★

ಕಡಬ ಕುಂಬಾಟ್ ಸತೀಶ್ ರಾವ್ ಹಾಗೂ ಶ್ರೀಮತಿ ಸಾವಿತ್ರಿ (ಠಾಣೆ ಮುಂಬೈ) ಇವರ ಸುಪುತ್ರ **ಚಿ। ಆದಿತ್ಯ** ಮತ್ತು ಪಡುಬೆಳ್ಳೆ ಕುಂಜಾರು ಡಾ. ವಾಸುದೇವ ರಾವ್ ಹಾಗೂ ಶ್ರೀಮತಿ ವಾಣಿ (ಠಾಣೆ ಮುಂಬೈ) ಇವರ ಸುಪುತ್ರಿ **ಚಿ। ಸೌ। ವರ್ಷ** ಇವರ ವಿವಾಹವು ತಾ.21.08.2022 ಭಾನುವಾರ ಪಾಜಕ ಕ್ಷೇತ್ರ ಮಧ್ವಸಭಾಭವನದಲ್ಲಿ ಜರಗಿತು.

★★★★ ★★★★

ಶ್ರೀ ರಮೇಶ್ ರಾವ್ ಹಾಗೂ ಶ್ರೀಮತಿ ಸಂಗೀತ ಇವರ ಪುತ್ರಿ **ಚಿ। ಸೌ। ಪಲ್ಲವಿ** ಮತ್ತು ಶ್ರೀಮತಿ ಸಂಗೀತ ಹಾಗೂ ಶ್ರೀ ಸಂತೋಷ್ ರಾವ್ ಮುಂಬೈ ಅವರ ಪುತ್ರ **ಚಿ। ಸಂಕೇತ** ಇವರ ವಿವಾಹವು ತಾ.05.09.2022ರಂದು ಶ್ರೀ ಶಾರದಾ ಮಂಟಪದಲ್ಲಿ ಜರಗಿತು.



RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

PRODUCTS ARE AVAILABLE AT ATTRACTIVE DISCOUNT PRICES


BATTERY PLANET
SALES & SERVICES
Dealers : Inverter, Batteries, Gas Geysers & Solar Water Heaters
Udupi, Padubidri, Contact : 94824 57926, 99455 43051
* Inverter+battery rates starts from Rs. 11,990

## ಶ್ರೀಮತಿ ಮೋಹಿನಿ ಡಿ.ಎಸ್.ರಾವ್ ನಿಧನ



ಬೆಂಗಳೂರಿನ ರೆಮಿಡಿಕ್ಸ್ ಫಾರ್ಮಾದ ಆಡಳಿತ ನಿರ್ದೇಶಕಿ, ಕೊಡುಗೈದಾನಿ ದಿ। ಡಾ.ಮಾಂಟ್ರಾಡಿ ದಯಾನಂದ ಎಸ್.ರಾವ್ ಇವರ ಧರ್ಮಪತ್ನಿ ಶ್ರೀಮತಿ ಮೋಹಿನಿ ಇವರು ತಮ್ಮ 87ನೇ ವಯಸ್ಸಿನಲ್ಲಿ ತಾ.06-09-2022ರಂದು ಬೆಂಗಳೂರಿನಲ್ಲಿ ನಿಧನರಾದರು. ಇವರು ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

ಡಾ। ದಯಾನಂದ ರಾವ್ ಸಾಲವಿದ್ಯಾರ್ಥಿ ವೇತನವನ್ನು ನಮ್ಮ ಸಂಘಕ್ಕೆ ಪ್ರತೀ ವರ್ಷ ನೀಡುತ್ತಾ ಬಂದಿದ್ದರು. ಅವರ ನಿಧನದ ಬಳಿಕವೂ ಇತ್ತೀಚಿನ ವರೆಗೆ ನಮ್ಮ ಸಂಘಕ್ಕೆ ಈ ದೇಣಿಗೆಯನ್ನು ಶ್ರೀಮತಿ ಮೋಹಿನಿ ರಾವ್ ಹಾಗೂ ಅವರ ಮಕ್ಕಳು ನೀಡುತ್ತಾ ಬಂದಿರುತ್ತಾರೆ. ಶ್ರೀಮತಿ ಮೋಹಿನಿ ರಾವ್‌ರವರ ನಿಧನಕ್ಕೆ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರು ಸಂತಾಪವನ್ನು ಸೂಚಿಸಿರುತ್ತಾರೆ.



## ಉದಯಾದ್ರಿ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಪಡುಬಿದ್ರಿ : ಸೌರಋಗುಪಾಕರ್ಮ

ದಿನಾಂಕ 08.09.2022 ರ ಗುರುವಾರ ದಂದು ಬೆಳಿಗ್ಗೆ 7-00 ಗಂಟೆಗೆ ಸೌರಋಗುಪಾಕರ್ಮವು ಪುರೋಹಿತರಾದ ಶಿವಪ್ರಸಾದ್ ಮತ್ತು ಜಗದಾಭಿರಾಮ ಸ್ವಾಮಿ ಯುವರ ನೇತೃತ್ವದಲ್ಲಿ ಜರಗಿತು. ಈ ಕಾರ್ಯಕ್ರಮದಲ್ಲಿ ಸುಮಾರು 25ಮಂದಿ ಸಮಾಜ ಬಾಂಧವರು ಭಾಗವಹಿಸಿದರು ಆಡಳಿತ ಮಂಡಳಿ

## ಸಹಸ್ರ ಚಂದ್ರ ದರ್ಶನ ಶಾಂತಿ



ತಾ. 20-08-2022ರ ಶನಿವಾರ ಚಿಟ್ಪಾಡಿ ಎಂ. ಸದಾನಂದರಾಯರ ಸಹಸ್ರ ಚಂದ್ರ ಶಾಂತಿ ಹೋಮ ಜರಗಿತು. ಸದಾನಂದರಾಯರ ಮಕ್ಕಳು, ಮೊಮ್ಮಕ್ಕಳು ಹಾಗೂ ಬಂಧು ಮಿತ್ರರೊಂದಿಗೆ ಈ ಸಮಾರಂಭವು ಜರಗಿತು. ಧಾರ್ಮಿಕ ಕಾರ್ಯಕ್ರಮದ ಬಳಿಕ 11.30ಯಿಂದ ಹರಿಕಥೆ ನಡೆಯಿತು.

## ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ "ಶ್ರೀಕೃಷ್ಣ ಜನ್ಮಾಷ್ಟಮಿ"




ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ.14.8.2022ರ ರವಿವಾರ "ಶ್ರೀಕೃಷ್ಣ ಜನ್ಮಾಷ್ಟಮಿ" ಆಚರಿಸಲಾಯಿತು. ಬೆಳಿಗ್ಗೆ ಗುರು ಸಪರ್ಯಾ, ವಿವಿಧ ಪಾರಾಯಣಗಳ ಬಳಿಕ ಭಗವದ್ಗೀತೆ ಪಠಣ ಸ್ಪರ್ಧೆ, ಮುದ್ದು ಕೃಷ್ಣ ವೇಷ ಸ್ಪರ್ಧೆ, ಭಕ್ತಿಗೀತೆ ಸ್ಪರ್ಧೆ ವಿವಿಧ ವಿಭಾಗಗಳಲ್ಲಿ ನಡೆಯಿತು. ಮಡಕೆ ಒಡೆಯುವ ಸ್ಪರ್ಧೆ, ಚಕ್ಕುಲಿ ಊಹನೆ ಸ್ಪರ್ಧೆ, ಶಂಖ ಊದುವ ಸ್ಪರ್ಧೆಗಳು ಮುಕ್ತ ವಿಭಾಗಗಳಲ್ಲಿ ನಡೆದವು. ಸ್ಪರ್ಧೆಗಳ ತೀರ್ಪುಗಾರರಾಗಿ ಶ್ರೀಮತಿ ಸ್ನೇಹಲತಾ ದಿವಾಕರ್, ಶ್ರೀಮತಿ ಶ್ರೀಲತಾ ಜಯಪ್ರಕಾಶ್, ಶ್ರೀಮತಿ ಸುಜಾತ ಬೆಳ್ಳೆ, ಶ್ರೀ ರವಿಶಂಕರ್ ರಾವ್ ಸಹಕರಿಸಿದರು. ಭೋಜನಾನಂತರ ಶ್ರೀಕೃಷ್ಣನ ಬಗ್ಗೆ ರಸಪ್ರಶ್ನೆಯನ್ನು ಶ್ರೀ ಸಂಜಯ ಕುಮಾರ್ ಫಲಿಮಾರ್ ನಡೆಸಿಕೊಟ್ಟರು. ಮಧ್ಯಾಹ್ನ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪ್ರಾರ್ಥನೆ ಬಳಿಕ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಬಗ್ಗೆ ಶ್ರೀಮತಿ ಮಂಜುಳಾ ಮುರಳೀಧರ್ ರಚಿಸಿ, ಶ್ರೀ ಕೃಷ್ಣರಾಜ್ ಪಡುಬಿದ್ರಿ ರಾಗಸಂಯೋಜನೆ ಮಾಡಿದ ಹಾಡನ್ನು ಗಾಯಕರು ಸಾಮೂಹಿಕವಾಗಿ ಹಾಡಿದರು. ವೈಯಕ್ತಿಕ ನೃತ್ಯಗಳು, ಶ್ರೀಮತಿ ಅನುರಾಧಾ ರಾವ್ ನಿರ್ದೇಶಿಸಿದ ಸಮೂಹ ನೃತ್ಯಗಳು ಸರ್ವರನ್ನು ರಂಜಿಸಿದವು. ಮಹಿಳಾ ವೇದಿಕೆ ಪಧಾಧಿಕಾರಿಗಳಾದ ಶ್ರೀಮತಿ ಕನಕವಲ್ಲಿ ಹರ್ಷಕುಮಾರ್, ಶ್ರೀಮತಿ ಕುಸುಮಾ ನವೀನ್ ಕುಮಾರ್, ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್, ಶ್ರೀಮತಿ ಭುವನಾ ನಾಗರಾಜ್, ಡಾ। ಜಯಲಕ್ಷ್ಮೀ, ಯುವವೇದಿಕೆಯ ಶ್ರೀ ಅನಿಲ್ ನೆಲ್ಲಿಕುಂಜೆ, ಶ್ರೀ ಸುರೇಶ್ ಕಡಬರವರು ವ್ಯವಸ್ಥೆಗಳಲ್ಲಿ ಸಹಕರಿಸಿದರು. ಶ್ರೀ ಆಶೋಕ್ ನಂದಾವರ ಬಹುಮಾನಗಳನ್ನು ಪ್ರಾಯೋಜಿಸಿದರು. ಸಭಾದ ಅಧ್ಯಕ್ಷರಾದ ಶ್ರೀ ಹರ್ಷ ಕುಮಾರ್ ಕೇದಿಗೆ, ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್ ಬಹುಮಾನ ವಿತರಿಸಿದರು. ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು. ಧನ್ಯವಾದ ಸಮರ್ಪಣೆ, ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ಬೆಳ್ವಾಯಿ ಎಂ. ದೇವಾನಂದ ಭಟ್‌ರಿಗೆ ಯಕ್ಷ ತೀರ್ಥ ಸಂಘಟನಾ ಪ್ರಶಸ್ತಿ



ಯಕ್ಷ ತೀರ್ಥ ನೂರಾಲ್ಬೆಟ್ಟು ನಾರಾವಿ ಇದರ ವಾರ್ಷಿಕೋತ್ಸವದ ಸಂದರ್ಭ ಕಲಾವಿದ ಬೆಳ್ವಾಯಿ ಎಂ. ದೇವಾನಂದ ಭಟ್ ಇವರನ್ನು 25 ವರುಷದಿಂದ ಶ್ರೀ ಯಕ್ಷದೇವದ ಕಲಾ ಸಂಘಟಕ, ಯಕ್ಷಗಾನ ಗುರುಗಳು ಎಂಬ ನೆಲೆಯಲ್ಲಿ ಚಿನ್ನದ ನಾಣ್ಯದೊಂದಿಗೆ ಯಕ್ಷ ತೀರ್ಥ ಸಂಘಟನಾ ಪ್ರಶಸ್ತಿ ನೀಡಿ ಸಮ್ಮಾನಿಸಲಾಯಿತು. ಈ ಸಂದರ್ಭ ಯಕ್ಷತೀರ್ಥ ಸಂಘಟನೆಯ ಅಧ್ಯಕ್ಷ ಶ್ರೀ ಸದಾನಂದ ಆಚಾರ್ಯ, ಕಟೀಲು ದೇವಸ್ಥಾನ ಅರ್ಚಕರಾದ ಶ್ರೀ ಹರಿನಾರಾಯಣದಾಸ ಅಸ್ರಣ್ಣ, ಅರ್ಥದಾರಿ ಜಬ್ಬಾರ್ ಸಮೋ ಸಂಪಾಜೆ, ನಾರಾವಿ ಬಸದಿಯ ಧರ್ಮದರ್ಶಿ ಮುಖ್ಯರು ವೇದಿಕೆಯಲ್ಲಿ ಇದ್ದು ಅಪಾರ ಪ್ರೇಕ್ಷಕ ಸಂದೊಹದಲ್ಲಿ ಕಾರ್ಯಕ್ರಮ ಸಂಪನ್ನಗೊಂಡಿತು.

## ಕಾರ್ಕಳ ಶಂಕರ ಪ್ರತಿಷ್ಠಾನದಲ್ಲಿ ವರಮಹಾಲಕ್ಷ್ಮಿ ಪೂಜೆ



ಕಾರ್ಕಳ ಶಂಕರ ಪ್ರತಿಷ್ಠಾನದ ವತಿಯಿಂದ ದಿನಾಂಕ 12-08-2022ರ ಪೂರ್ಣಿಮಿಯಂದು ಪ್ರಸಾದ ಭವನದಲ್ಲಿ ವರಮಹಾಲಕ್ಷ್ಮಿ ಪೂಜೆ ಹಮ್ಮಿಕೊಳ್ಳಲಾಗಿತ್ತು. ಪ್ರಸಾದ ಭವನದ ಶ್ರೀಮತಿ ಸೌಮ್ಯ ರಾವ್ ಮತ್ತು ಶ್ರೀ ಭವಾನಿ ಶಂಕರರಾಯರು ಅದ್ದೂರಿಯಾಗಿ ಶೃಂಗರಿಸಿದ ಮಂಟಪದಲ್ಲಿ ವರಮಹಾಲಕ್ಷ್ಮಿಯನ್ನು ಪ್ರತಿಷ್ಠಾಪಿಸಿ ಪೂಜೆ ನಡೆಸುವುದರೊಂದಿಗೆ ಆಹ್ವಾನಿತರೆಲ್ಲರೂ ಉಪಹಾರದ ವ್ಯವಸ್ಥೆ ಮಾಡಿದ್ದರು.

ಶ್ರೀ ಶಂಕರ ಪ್ರತಿಷ್ಠಾನದ ಸದಸ್ಯೆಯರು ಸಾಮೂಹಿಕ ಭಜನೆ ನೆರವೇರಿಸಿ ಕುಂಕುಮಾರ್ಚನೆ ಮಾಡಿ ವರಮಹಾಲಕ್ಷ್ಮಿಯ ಕೃಪೆಗೆ ಪಾತ್ರರಾದರು. ಪಾವಂಜೆ ದೇವಸ್ಥಾನದ ಯಾಜಿ ನಿರಂಜನ ಭಟ್ರ ಪೌರೋಹಿತ್ಯದಲ್ಲಿ ಪೂಜೆ ವೈಭವದಿಂದ ನೆರವೇರಿತು. ಶ್ರೀಮತಿ ಸೌಮ್ಯ ರಾವ್ ಸುಮಂಗಲಿಯರಿಗೆ ಬಾಗಿನವಿತ್ತರು. ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಕೇಶವ್ ರಾವ್ ಕಾರ್ಯಕ್ರಮದ ಪ್ರಾಯೋಜಕರಿಗೂ ಅತಿಥಿಗಳಿಗೂ ಧನ್ಯವಾದವಿತ್ತರು.

## ಉಷಾ ರಾವ್. ಯು ಇವರಿಗೆ ಆದರ್ಶ ಶಿಕ್ಷಕಿ ಪ್ರಶಸ್ತಿ



ಕಾರ್ಕಳ ಜ್ಞಾನಸುಧಾ ಆಂಗ್ಲಮಾಧ್ಯಮ ಪ್ರೌಢ ಶಾಲೆಯ ಪ್ರಾಂಶುಪಾಲೆ ಉಷಾ ರಾವ್ ಯು ಇವರಿಗೆ ಉಡುಪಿಯ ಆದರ್ಶ ಆಸ್ಪತ್ರೆ ಮತ್ತು ಉಡುಪಿ ಜಿಲ್ಲಾ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಹಯೋಗದಲ್ಲಿ ನಡೆಯುವ ಶಿಕ್ಷಕರ ದಿನಾಚರಣೆ ಸಮಾರಂಭದಲ್ಲಿ ಕೊಡಮಾಡುವ ಜಿಲ್ಲಾ ಮಟ್ಟದ ಆದರ್ಶ ಶಿಕ್ಷಕ ಪ್ರಶಸಿಗೆ ಭಾಜನರಾಗಿದ್ದಾರೆ. ಇವರು ಈ ಹಿಂದೆಯೂ ಕೂಡಾ ಉಡುಪಿ ಜಿಲ್ಲಾ ಉತ್ತಮ ಸಾಧಕ ಶಿಕ್ಷಕಿ ಪ್ರಶಸ್ತಿ, ಉತ್ತಮ ಗಣಿತ ಶಿಕ್ಷಕಿ ಪ್ರಶಸ್ತಿಗೂ ಭಾಜನರಾಗಿರುತ್ತಾರೆ.

## ಕಿನ್ನಿಮುಲ್ಕಿ-ಕನ್ನರ್ಪಾಡಿ ಬ್ರಾಹ್ಮಣ ಸಂಘದ ಅಧ್ಯಕ್ಷರಾಗಿ ಶ್ರೀ ಕೊಕ್ರಾಡಿ ಸುರೇಶರಾವ್, ಕುತ್ಪಾಡಿ



ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿ ಇದರ ನಿರ್ದೇಶಕರಾದ ಶ್ರೀ ಕೊಕ್ರಾಡಿ ಸುರೇಶರಾವ್, ಕುತ್ಪಾಡಿರವರು 2022-23 ನೇ ವರ್ಷದ ಕಿನ್ನಿಮುಲ್ಕಿ-ಕನ್ನರ್ಪಾಡಿ ಬ್ರಾಹ್ಮಣ ಸಂಘದ ಅಧ್ಯಕ್ಷರಾಗಿ ತಾ. 03.09.2022ರಂದು ಜರಗಿದ ಮಹಾಸಭೆಯಲ್ಲಿ ಪುನರಾಯ್ಕೆಗೊಂಡಿದ್ದಾರೆ. ಅವರಿಗೆ ಅಭಿನಂದನೆಗಳು.


ಶ್ರೀ ಕ್ಷೇತ್ರ ಉದಯಾದ್ರಿ

### ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ

ಉದಯಾದ್ರಿ, ಪಡುಬಿದ್ರಿ, ಉಡುಪಿ ಜಿಲ್ಲೆ - 574111

### ಶ್ರೀ ಶಂಕರ ಭಗವತ್ಪಾದಾಚಾರ್ಯರ ಮೂರ್ತಿ ಪ್ರತಿಷ್ಠಾಪನಾ ಆಮಂತ್ರಣ



ಶ್ರೀ ಶೃಂಗೇರಿ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ಶ್ರೀ ಉದಯಾದ್ರಿ ಕ್ಷೇತ್ರಕ್ಕೆ ದಯಮಾಡಿಸಿ ಬ್ರಹ್ಮಕುಂಭಾಭಿಷೇಕಾದಿಗಳನ್ನು ಸಂಪನ್ನಗೊಳಿಸಿದ ಸಂದರ್ಭದಲ್ಲಿ ಶ್ರೀ ಶಂಕರ ಭಗವತ್ಪಾದಾಚಾರ್ಯರ ಶಿಲಾವಿಗ್ರಹವನ್ನು ಈ ದೇವಸ್ಥಾನ ದಲ್ಲಿ ಪ್ರತಿಷ್ಠಾಪಿಸಿ ಆರಾಧಿಸಬೇಕೆಂದು ನೀಡಿದ ಅಪ್ಪಣೆ ಯಂತೆ ನಿರ್ಮಿಸಲಾದ ಅಮೃತಶಿಲಾಮೂರ್ತಿಯನ್ನು ಬರುವ ನವರಾತ್ರೋತ್ಸವದ ಎರಡನೇ ದಿನ 27.09.2022ನೇ ಮಂಗಳವಾರ ದಂದು ಶೃಂಗೇರಿಯಿಂದ ತಂದು 28.09.2022ನೇ ಬುಧವಾರ ಶುಭಮುಹೂರ್ತದಲ್ಲಿ ಪ್ರತಿಷ್ಠಾಪಿಸಲಾಗುವುದೆಂದು ನಿಶ್ಚಯಿಸಲಾಗಿದೆ.

ದಿನಾಂಕ 27.09.2022ರ ಮಂಗಳವಾರ ಸಂಜೆ 4.00 ಗಂಟೆಗೆ ಸರಿಯಾಗಿ ಶೃಂಗೇರಿಯಿಂದ ತಂದ ಶ್ರೀ ಶಂಕರಭಗವತ್ಪಾದಾಚಾರ್ಯರ ವಿಗ್ರಹದ ಮೆರವಣಿಗೆ ನಂದಿಕೂರು ಜನಾರ್ದನರಾಯರ ದೇವಿಕೃಪಾ ಮನೆಯ ವಠಾರದಿಂದ ಹೊರಡುವುದು. ಹೆಚ್ಚಿನ ಸಂಖ್ಯೆಯಲ್ಲಿ ಭಗವದ್ಭಕರು ತಮ್ಮ ತಮ್ಮ ವಾಹನಗಳಲ್ಲಿ ಬರಬೇಕೆಂದು, ಮಾತೆಯರು ದೇವಸ್ಥಾನದ ದ್ವಾರದಿಂದ ಕಲಶದೊಂದಿಗೆ ಸ್ವಾಗತಿಸಬೇಕಾಗಿ ವಿನಂತಿ.


– ಆಡಳಿತ ಮಂಡಳಿ

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದಲ್ಲಿ ಸೌರ ಋಗುಪಾಕರ್ಮ





ದಿನಾಂಕ 08.9.2022ರಂದು ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದಲ್ಲಿ ಪಾವಂಜೆ ಬ್ರಹ್ಮಶ್ರೀ ಜಗದೀಶ ಉಪಾಧ್ಯಾಯ ಹಾಗೂ ರವಿ ಉಪಾಧ್ಯಾಯರ ನೇತೃತ್ವದಲ್ಲಿ ಸೌರ ಋಗುಉಪಾಕರ್ಮವನ್ನು ಧಾರ್ಮಿಕ ವಿಧಿ ವಿಧಾನಗಳೊಂದಿಗೆ ನೆರವೇರಿಸಲಾಯಿತು. ಪೂಜಾಕರ್ತೃಗಳಾಗಿ ಕೃಷ್ಣಮೂರ್ತಿ ರಾವ್ ಉಪಸ್ಥಿತರಿದ್ದರು ಸಂಘದ ಪದಾಧಿಕಾರಿಗಳು, ಆಡಳಿತ ಮಂಡಳಿಯ ಸದಸ್ಯರು, ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.




## ಹೂವಿನ ಪೂಜೆ

ದಿನಾಂಕ 02.09.2022 ರಂದು ಶ್ರಾವಣ ಶುಕ್ರವಾರದ ಪ್ರಯುಕ್ತ ಮಹಿಳಾ ವೇದಿಕೆ ಮತ್ತು ಸಂಘದ ವತಿಯಿಂದ ಸಾಮೂಹಿಕ ಹೂವಿನ ಪೂಜೆಯು ನಡೆಯಿತು. ಭಜನೆ ಮತ್ತು ಲಲಿತಾ ಸಹಸ್ರನಾಮ, ಅಷ್ಟೋತ್ತರ ಪಠಿಸಿ, ಮಹಾಪೂಜೆಯನ್ನು ನೆರವೇರಿಸಲಾಯಿತು. ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಮಹಿಳಾ ವೇದಿಕೆಯ ಅಧ್ಯಕ್ಷರು, ಕಾರ್ಯಕರ್ತರು ಹಾಗೂ ಭಕ್ತಾದಿಗಳು ಉಪಸ್ಥಿತರಿದ್ದರು.

## ಶ್ರೀ ಶಾರದಾ ಮಂಟಪದಲ್ಲಿ ಗಣೇಶ ಚತುರ್ಥಿಯಂದು ಗಣಹೋಮ

ದಿನಾಂಕ 31.08.2022ರಂದು ಗಣೇಶ ಚತುರ್ಥಿಯಂದು ವರ್ಷಪ್ರತಿಯಂತೆ ಶ್ರೀ ಶಾರದಾ ಮಂಟಪ ಉಡುಪಿಯಲ್ಲಿ ಗಣಹೋಮ ಪೂಜಾ ಕಾರ್ಯಕ್ರಮ ನೆರವೇರಿತು. ಪೂಜಾ ಕರ್ತೃಗಳಾಗಿ ಶ್ರೀ ಸತೀಶರಾವ್ ಆರೋಗ್ಯ ಇಲಾಖೆ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಹೇಮಾಮಾಲಿನಿ ದಂಪತಿಗಳು ಸಹಕರಿಸಿದರು.



## ನಿತ್ಯೋತ್ಸವ ಕಂಡ ಬಾರಕೂರು

### ಲೋಕಾರ್ಪಣೆ

(ಲೇಖಕ : ಶ್ರೀ ವೈ. ಮೋಹನ ರಾವ್)

ದಿನಾಂಕ : 24.09.2022 ಶನಿವಾರ
ಸಮಯ : ಸಂಜೆ ಗಂಟೆ 4.00
ವೇದಿಕೆ : ಕಲಾಮಂದಿರ, ನ್ಯಾಷನಲ್ ಪದವಿಪೂರ್ವ ಕಾಲೇಜು, ಬಾರಕೂರು

**ಸಭಾ ಕಾರ್ಯಕ್ರಮ**

ಅಧ್ಯಕ್ಷತೆ : ಶ್ರೀ ಬಿ. ಶಾಂತಾರಾಮ ಶೆಟ್ಟಿ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ಅಧ್ಯಕ್ಷರು, ಬಾರಕೂರು ವಿದ್ಯಾಭಿವರ್ಧಿನಿ ಸಂಘ (ರಿ.), ಬಾರಕೂರು

ಅನಾವರಣ : ಶ್ರೀ ಬಿ. ಸೀತಾರಾಮ ಶೆಟ್ಟಿ, ವಿಶ್ರಾಂತ ಪ್ರಾಂಶುಪಾಲರು, ಕಾರ್ಯದರ್ಶಿ, ಬಾರಕೂರು ವಿದ್ಯಾಭಿವರ್ಧಿನಿ ಸಂಘ (ರಿ.), ಬಾರಕೂರು

ಕೃತಿ ಪರಿಚಯ : ಡಾ. ಬಿ. ಜಗದೀಶ ಶೆಟ್ಟಿ, ವಿಶ್ರಾಂತ ಪ್ರಾಂಶುಪಾಲರು, ಆಡಳಿತಾಧಿಕಾರಿ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಎಂ.ಜಿ.ಎಂ. ಕಾಲೇಜು, ಉಡುಪಿ

ಗೌರವಾರ್ಪಣೆ : ಶ್ರೀ ಬನ್ನಂಜೆ ಬಾಬು ಅಮೀನ್, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ತುಳು ಜಾನಪದ ವಿದ್ವಾಂಸರು

ಮುಖ್ಯ ಅತಿಥಿಗಳು : ಶ್ರೀ ಯು.ಕೊಟ್ರಸ್ವಾಮಿ, ಪ್ರಾಂಶುಪಾಲರು, ನ್ಯಾಷನಲ್ ಪದವಿಪೂರ್ವ ಕಾಲೇಜು, ಬಾರಕೂರು
ನಾಡೋಜ ಡಾ. ಜಿ. ಶಂಕರ್, ಪ್ರವರ್ತಕರು, ಶ್ಯಾಮಿಲಿ ಸಮೂಹ ಸಂಸ್ಥೆಗಳು, ಅಂಬಲಪಾಡಿ
ಶ್ರೀ ಎಸ್. ನಿತ್ಯಾನಂದ ಪಡ್ರೆ, ವಿಶ್ರಾಂತ ಹಿರಿಯ ಉಪಸಂಪಾದಕರು, ಉದಯವಾಣಿ, ಮಣಿಪಾಲ
ಶ್ರೀ ನಂದಳಿಕೆ ಬಾಲಚಂದ್ರ ರಾವ್, ವಿಶ್ರಾಂತ ಅಧಿಕಾರಿಗಳು, ಕರ್ಣಾಟಕ ಬ್ಯಾಂಕ್, ಉತ್ತಮ ಸಾಹಿತ್ಯ ಸಂಘಟಕರು ಹಾಗೂ ಗೌರವ ನಿರ್ದೇಶಕರು, ಮುದ್ರಣ ಪ್ರಕಾಶನ, ಮಂಗಳೂರು.
ಯಕ್ಷಗುರು ಶ್ರೀ ಐರೋಡಿ ಮಂಜುನಾಥ ಕುಲಾಲ, ಯಡ್ತಾಡಿ.
ಶ್ರೀ ಬಿ. ಗಣೇಶ ಕಾಂಚನ್, ಚಾರ್ಟರ್ಡ್ ಅಕೌಂಟೆಂಟ್, ಉಡುಪಿ

ವಂದನಾರ್ಪಣೆ : ಶ್ರೀ ಧೀರಜ್. ವೈಡಿಆರ್, ಟೆಕ್ಕಿ ಎಂಟ್ರಪ್ರನರ್

ನಿರ್ವಹಣೆ : ಶ್ರೀ ರಾಮಭಟ್ಟ ಸಜಂಗದ್ದೆ, ವಿಶ್ರಾಂತ ಉಪನ್ಯಾಸಕರು, ಬಾರಕೂರು


–: ಸರ್ವರಿಗೂ ಆದರದ ಸ್ವಾಗತ :–

**ಬ್ರಹ್ಮಗಿರಿ ಪ್ರಕಾಶನ**
'ದೃಷ್ಟಿ', 3-2-28ಎ-1 ಸಿ.ಪಿ.ಸಿ. ಲೇ-ಔಟ್, ಎರಡನೇ ಅಡ್ಡರಸ್ತೆ,
ಶ್ರೀ ಪ್ರಸನ್ನ ಗಣಪತಿ ಮಂದಿರ ರಸ್ತೆ, ಬ್ರಹ್ಮಗಿರಿ ಬಳಿ, ಅಂಬಲಪಾಡಿ, ಉಡುಪಿ, ಕರ್ನಾಟಕ-576 103.



ತಂತ್ರಾಡಿ ವಿಶ್ವನಾಥ ಶಾನುಭೋಗ್
94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು


GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022
SHREE KRISHNA
ELECCTRONICS & ELECTRICALS
Sri Balaji Complex, Shop No-G-7, Near KSRTC Bus Stand, Udupi - 576101.
City Towers, Service Bus Stand, Near Rao and Rao Circle, State Bank, Mangalore - 575001
Branch at Mahalaxmi Prabha Complex, Market Road, Opp Tajmahal Hotel, Karkala

With Best Compliments From :
BUILDING DREAMS, ENHANCING LIVES.


Land Trades
BUILDERS & DEVELOPERS
BUILDING TRUST, DELIVERING VALUE
MANGALURU'S LEADING REAL ESTATE COMPANY
RESIDENTIAL | COMMERCIAL | PLOTS
For More Details : 8882 777 444 | 0824 2425424, 2423866 | www.landtrades.in
Follow us on :


Owned, Published & Edited by : Sri Y. Muralikrishna Rao onbehalf of Sri Sthanika Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 2958444
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org